ಕಲ್ಯಾಣ ಕಿರಣ

ಏಪ್ರಿಲ್ - 2006 ಬೆಲೆ : ರೂ. 6 /-





ಅಲ್ಲಮ ಪ್ರಭು ಗಿರಿಯಲ್ಲಿರುವ ಅಲ್ಲಮ ಪ್ರಭು ದಿವ್ಯಾಲಯ



ಪ್ರಥಮ ಲಿಂಗಾಯತ ಗಣಮೇಳ ಸಮುದಾಯ ಪ್ರಾರ್ಥನೆ ವೇದಿಕೆಯ ಚಿತ್ರ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-35 ಬಸವ ಶಕೆ-872 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-11 ಏಪ್ರಿಲ್-2006 ವಾರ್ಷಿಕ ಚಂದಾ 60 ರೂ.

ಅಲ್ಲಮ ಪ್ರಭು ದೇವರು



ಪ್ರಭುವು ಭುವಿಗೆ ಬಂದಾ। ಜೋ ಜೋ
ಅಲ್ಲಮ ಪ್ರಭು ಬಂದಾ ॥ಪ॥

ಬಸವ ಕಲ್ಯಾಣದ ಶೂನ್ಯ ಪೀಠದ
ಪ್ರಥಮ ಜಗದ್ಗುರುವಾಗಿ ಬೆಳಗಲು ॥ಅ.ಪ॥

ಚೈತ್ರ ಮಾಸದ ಪ್ರತಿ ಪದೆಯಂದು
ಮಾಮರ ತಳಿತಿರೆ ಕೋಗಿಲೆ ಹಾಡಿರೆ
ವಚನ ವಾಙ್ಮಯದ ಬನದಲಿ ಹಾಡಲು
ದಾರ್ಶನಿಕ ಕೋಗಿಲೆಯಾಗಿ ಐತಂದ ॥1॥

ಕನ್ನಡ ನಾಡಿನ ಶಿವಮೊಗ್ಗ ಜಿಲ್ಲೆಯ
ಬಳ್ಳಿಗಾವಿ ಗ್ರಾಮದ ಚಿತ್ರಬ್ರೆಯಾಗಿ
ನಿರಂಕಾರ ಸುಜ್ಞಾನಿ ದಂಪತಿ ಗರ್ಭದಿ
ಬಿದಿಗೆಯ ಚಂದಿರನಂತೆ ಮೂಡುತ ॥2॥

ಅನಿಮಿಷಯೋಗಿಯಿಂ ಅನುಗ್ರಹ ಹೊಂದಿ
ಇಷ್ಟಲಿಂಗ ನಿಧಿಯ ಹರುಷದಿ ಪಡೆದು
ಬಸವ ಭಕ್ತಿ ಮಾರ್ಗಕೆ ಒಲಿದು ನಿಂದು
ಜ್ಞಾನ ತರಂಗಿಣಿಯಾಗಿ ಸಂಚರಿಸಲು ॥3॥

ಅನುಭವ ಮಂಟಪದ ಜಂಗಮ ಜ್ಯೋತಿ
ಅಶ್ವವನೇರಿ ತತ್ತ್ವ ಹರಡಿದೆ
ಅಲ್ಲಮಗಿರಿಯಲಿ ನೆಲೆಸಿದ ವಿರಾಗಿ
ಕದಳಿಯ ಬನದಲ್ಲಿ ಬಯಲಾದ ಯೋಗಿ ॥4॥

ಜಯಜಯವೆನ್ನುತ ಹಾಡುತ ಪೂಜಿಸಿ
ಜೋ ಜೋ ಎನ್ನುತ ತೊಟ್ಟಿಲ ತೂಗಿರಿ
ಮಂಗಲದಾರತಿ ಭಕ್ತಿಯಿಂ ಬೆಳಗಿರಿ
ವ್ಯೋಮಕಾಯ ಸಿದ್ಧ ಪ್ರಭುವಿಗೆ ನಮಿಸಿರಿ ॥5॥

-ಮಾತಾಜಿ

★ಕಲ್ಯಾಣ ಕಿರಣ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 600ರೂ.
ಸಂಚಿಕೆ 11 ಏಪ್ರಿಲ್ - 2006 ವಾರ್ಷಿಕ ಚಂದಾ 60ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ
1. ಅಲ್ಲಮ ಪ್ರಭು ದೇವರು	-ಮಾತಾಜಿ	-1
2. ಅನಾದಿ ಭಕ್ತ ಬಸವಣ್ಣನವರು	"	-3
3. ಗುರು ಚರಣಕೆ ನಮನ	"	-4
3. ಶರಣ ಬಂಧುಗಳಲ್ಲಿ ಕಳಕಳಿಯ ಬಿನ್ನಹ	"	-5
5. ಸೊಲ್ಲಾಪುರದಲ್ಲಿ ಪ್ರವಚನ ಮಂಗಲ ಸಮಾರಂಭ	"	-6
6. 5 ನೆಯ ಕಲ್ಯಾಣ ಪರ್ವದ ಸ್ಥೂಲ ರೂಪು ರೇಷೆ	"	-7
7. ಸಮಸ್ಯೆ ? - ಸಮಾಧಾನ !	"	-9
8. ಸೊಲ್ಲಾಪುರದಲ್ಲಿ ನಡೆದ ವಿಶ್ವಧರ್ಮ ಪ್ರವಚನದ ಭಾವಚಿತ್ರಗಳು		-21
9. ಪ್ರವಚನದ ಮಂಗಲ ಸಮಾರಂಭದ ಭಾವಚಿತ್ರಗಳು		-22
10.ಮಹಾರಾಷ್ಟ್ರದಲ್ಲಿ ನಡೆದ ಪ್ರಥಮ ಲಿಂಗಾಯತ ಗಣಮೇಳದ ಭಾವಚಿತ್ರಗಳು		-23-29
8. ಬಸವ ಕಲ್ಯಾಣದಲ್ಲಿ ಐದನೆಯ ಕಲ್ಯಾಣ ಪರ್ವ ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ		-40
9. ಬಸವ ಜಯಂತಿಯ ಕಾರ್ಯಕ್ರಮಗಳು		-40



ವಿಶ್ವಗುರು ಬಸವಣ್ಣನವರ 873ನೆಯ ಜಯಂತಿ ಉತ್ಸವವು ದೇವ (ಭಾನು)ವಾರ ದಿ.30-4-2006 ರಂದು ಬಂದಿದ್ದು ಅಂದಿನಿಂದ 873ನೆಯ ಬಸವ ಶಕೆಯು ಆರಂಭವಾಗಲಿದೆ. ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಮತ್ತು ಸಾರ್ವಜನಿಕವಾಗಿ ಬಸವ ಜಯಂತಿಯನ್ನು ಆಚರಿಸಬೇಕು.

ವಿಶ್ವಗುರು, ಮಂತ್ರ ಪುರುಷ ಬಸವಣ್ಣನವರು ಎಲ್ಲರಿಗೂ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

-ಜಗದ್ಗುರು ಮಾತೆ ಮಹಾದೇವಿ

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790
ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಅನಾದಿಭಕ್ತ ಬಸವಣ್ಣನವರು

ಆದಿ ಜಂಗಮ ಅನಾದಿ ಭಕ್ತನೆಂಬುದನಾರು ಬಲ್ಲರು ಹೇಳಾ ಬಸವಣ್ಣಾ ?
ನಿತ್ಯ ನಿರಾಕಾರ ಘನವು ಶಕ್ತಿಯಿಲ್ಲದೆ ಇದ್ದಡೆ
ಆಗಲೆ ಬಯಲಾದಹುದೆಂದು,
ನೀನು ಘನ ಚೈತನ್ಯವೆಂಬ ಕಾಯವ ಧರಿಸಿದಡೆ
ಆ ಬಯಲು ಪರಬ್ರಹ್ಮವೆಂಬ ನಾಮವನೆಯ್ದಿತ್ತು ನೋಡಾ ಬಸವಣ್ಣಾ!
ಆ ಮಹಾಘನವು ತನ್ನ ವಿನೋದದಿಂದ ಸಾಕಾರವನೆಯ್ದಿದಡೆ.
ಧರ್ಮವೆಂಬ ಕಾಯವ ಧರಿಸಿ
ಆ ಮೂರ್ತಿಗೆ ಆಧಾರವಾದೆಯಾಗಿ,
ಜಗದ ಕರ್ತ ಶಿವನೆಂಬ ನಾಮವಾಯಿತ್ತಲ್ಲಾ ಬಸವಣ್ಣಾ.
ಜಂಗಮವೆ ಲಿಂಗವೆಂದು ನೀನು ಭಾವಿಸಲಾಗಿ,
ನಿನ್ನ ಸನ್ನಿಧಿಯಿಂದ ಪ್ರತಿನಿಧಿಯಾಯಿತ್ತು ನೋಡಾ ಬಸವಣ್ಣಾ
ಲಿಂಗವ ಹಿಡಿದು ನೀನು ಪೂಜಿಸಲಾಗಿ ಲಿಂಗವು ಹೆಸರು ವಡೆಯಿತ್ತು ನೋಡಾ ಬಸವಣ್ಣಾ!
ಪ್ರಸಾದವನು ನೀನು ಕೊಂಡು ಪಥವ ತೋರಿದೆಯಾಗಿ,
ಪ್ರಸಾದವು ಹೆಸರಾಯಿತ್ತು ನೋಡಾ ಬಸವಣ್ಣಾ
ಇದು ಕಾರಣ, ನೀನೆ ಅನಾದಿಭಕ್ತ, ನಾನೆ ಅನಾದಿಯಿಂದಿತ್ತ!
ನೀನು ಮಾಡಲಾಗಿ ಆನಾದೆನೆಂಬುದ
ನಮ್ಮ ಗುಹೇಶ್ವರನೆ ಬಲ್ಲ ಕಾಣಾ ಸಂಗನ ಬಸವಣ್ಣಾ! (ಅ.ಪ್ರ.ವ : 925)

ಧರ್ಮಪಿತ, ಮಂತ್ರಪುರುಷ ಬಸವಣ್ಣನವರು ಜನಿಸಿದುದು ಆನಂದ ನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು (ದಿ.30-4-1134) ಇದೇ ಮೊದಲ ಬಾರಿಗೆ ಬಸವ ಜಯಂತಿ ದಿ.30-4-2006ಕ್ಕೆ ಒದಗಿ ಬಂದಿದೆ. ಅಂದು 872ನೆಯ ಬಸವ ಶಕೆ ಪೂರೈಸಿ 873ನೆಯ ಬಸವ ಶಕೆ ಪ್ರಾರಂಭವಾಗುತಲಿದೆ. ಇದು ಲಿಂಗಾಯತರ ಹೊಸ ವರುಷ ಆರಂಭವಾಗುವ ದಿವಸ.

1. ಅಂದು ಮನೆಗಳ ಮೇಲೆ ಷಟ್ಕೋನ ಸಹಿತ ಬಸವ ಧ್ವಜಗಳನ್ನು ಹಾರಿಸಬೇಕು. ಕಾರ್ಯಕ್ರಮದಲ್ಲಿ ಸಾಮೂಹಿಕವಾಗಿ ಹಾರಿಸಬೇಕು.
2. ಸುಪ್ರಭಾತದಲ್ಲಿ ಬಸವೇಶ್ವರ ಪೂಜಾವ್ರತ ಪೂರೈಸಿ, ಉಪಾಹಾರ ಮಾಡಿಕೊಂಡು ಬಸವ ಮಂಟಪ, ಬಸವೇಶ್ವರ ಗುಡಿಗಳು ಮುಂತಾದಲ್ಲಿ ತೊಟ್ಟಿಲು ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕು.
3. ಪ್ರತಿ ಊರಲ್ಲಿಯೂ ಮೆರವಣಿಗೆ ಉತ್ಸವ ನಡೆಸಬೇಕು. ಆದರೆ ಭಾಗವಹಿಸುವವರು ಸ್ನಾನಪೂಜೆ ಮಾಡಿ ಬರಬೇಕು. ತಂಬಾಕು, ಗುಟಕಾ ತಿನ್ನಬಾರದು, ಸಿಗರೇಟು - ಬೀಡಿ ಸೇದಬಾರದು, ಮದ್ಯಪಾನ ಮಾಡಿ ಭಾಗವಹಿಸಬಾರದು.
4. ಅಂಗಡಿಗಳವರು ತಮ್ಮ ಅಂಗಡಿಗಳ ಮುಂದೆ ರಾತ್ರಿ ವೇಳೆ ಸೀರಿಯಲ್ ಲೈಟ್ ಹಾಕಿಸಬೇಕು. ಅದೇ ರೀತಿ ಮನೆಯ ಮೇಲೆ ಸಹ ಸೀರಿಯಲ್ ಲೈಟು ಹಾಕಿಸಬೇಕು.
5. ಸಾರ್ವಜನಿಕ ದಾಸೋಹ. ಮುಖ್ಯ ರಸ್ತೆಗಳ ಮೇಲೆ ಶಾಮಿಯಾನಾ ಮಂಟಪ ಮಾಡಿ, ಅದಕ್ಕೆ ಬ್ಯಾನರ್ ಕಟ್ಟಿ ಅದರೊಳಗೆ ಬಸವ ಗುರುವಿನ ಭಾವಚಿತ್ರ ಇಟ್ಟು ಅಲಂಕರಿಸಿ, ಪೂಜಿಸಿ ಪ್ರಸಾದ ದಾಸೋಹ ಮಾಡಬೇಕು. ಹೆಚ್ಚಿನ ಪ್ರಮಾಣದಲ್ಲಿ ಪ್ರಸಾದ (ಊಟ) ಕೊಡಲಾಗದವರು ಕನಿಷ್ಟಪಕ್ಷ ಕೋಸುಂಬರಿ, ಪಾನಕ ಅಥವಾ ಮಜ್ಜಿಗೆಯನ್ನಾದರೂ ವಿತರಿಸಬೇಕು.
6. ಬಸವ ಜಯಂತಿಯ ಶುಭಾಶಯ ಪತ್ರ ಪರಿಚಿತರು. ಬಂಧು ಮಿತ್ರರಿಗೆ ಕಳಿಸಬೇಕು. [ವಿಶ್ವಕಲ್ಯಾಣ ಮಿಷನ್ ಸಂಸ್ಥೆ ಶುಭಾಶಯ ಪತ್ರಗಳನ್ನು ಮುದ್ರಿಸಿದ್ದು 10 ಪ್ರತಿಗೆ ರೂ. ಮನಿಯಾರ್ಡರ್ ಮಾಡಿ ಹಣ ಕಳಿಸಿದರೆ ಶುಭಾಶಯ ಪತ್ರಗಳನ್ನು ಕಳಿಸಲಾಗುವುದು. ಪೋಸ್ಟೇಜ್ ವೆಚ್ಚವನ್ನು, ವಿಳಾಸವನ್ನು ಕಳಿಸಿದರೆ ಕಳಿಸುವವರ ಹೆಸರು ಬರೆದು ನೇರವಾಗಿ ಬಸವ ಮಂಟಪದಿಂದಲೇ ಪೋಸ್ಟ್ ಮಾಡಲಾಗುವುದು]
7. ಚಿಕ್ಕ ಚಿಕ್ಕ ವಚನ ಗ್ರಂಥಗಳನ್ನು ಶಕ್ತ್ಯಾನುಸಾರ ಹಂಚಬಹುದು.

-ಮಾತಾಜಿ

ಮಾತಾಜಿ ಕುರಿತು

ಮಿಂಚಿದಿರಿ ಮಹಾತಾಯಿಯಾಗಿ ಮಾತೆ ಮಹಾದೇವಿ
ಮಿಂಚಿದಿರಿ ಸ್ಫಟಿಕದ ಸಲಾಕೆಯಂತೆ ಧರ್ಮ ಹರಡುತ
ಮಿಂಚಿದಿರಿ ವಿಶ್ವ ಧರ್ಮ ಪ್ರವಚನ ಕೃತಿ ರಚಿಸಿ
ಮಿಂಚಿದಿರಿ 21ನೆಯ ಶತಮಾನದಿ ಬಸವಾತ್ಮಜೆಯಾಗಿ
ಮಿಂಚಿದಿರಿ ಸದಾಚಾರ ಸದ್ಗುಣಗಳ ಬಿತ್ತಿ ಬೆಳೆಯುತ
ಮಿಂಚಿದಿರಿ 60 ವರ್ಷಗಳ ಸಾರ್ಥಕ ಜೀವನದಿಂದ

-ಮಹಾಂತೇಶ ರಾಜಗೋಳಿ, ಬೈಲಹೊಂಗಲ

ಗುರು ಚರಣಕೆ ನಮನ

ಗುರುವು ಸಿಕ್ಕರಮ್ಮ ಎನಗೆ
ಗುರುವು ಸಿಕ್ಕರಮ್ಮ
ಬಸವ ಧರ್ಮ ಪೀಠದ ಬಸವಾತ್ಮಜೆಯ ರೂಪದ
ಅನುಭವದ ಖಣಿಯಾದ ||ಗುರು||

ಕರ್ಮದ ಕಾಳಿಕೆ ಕಳೆಯುತಾ
ಜ್ಞಾನದ ವಸ್ತ್ರವ ತೊಡಿಸುತಾ
ದಿವ್ಯಮಂತ್ರವ ಜಪಿಸುತಾ
ಲಿಂಗದೇವನೊಳು ಬೆಸೆಯುವ ||1||



ಕಾಯದ ಕತ್ತಲೆ ಕಳೆಯುವ
ಮನವ ಮದವ ಮುರಿಯುವ
ಜನನ ಜಂಜಡ ಹರಿಯುವ
ದಿವ್ಯ ಜ್ಞಾನವ ಬೋಧಿಸುವ ||2||

ಧರ್ಮಗುರು ಬಸವಣ್ಣನೆನುತ
ವಚನ ಸಾಹಿತ್ಯ ಸಂಹಿತೆಯೆನುತ
ಶರಣ ಪರಂಪರೆ ನಮ್ಮದೆನುತ
ನೀತಿ ಸಂಸ್ಕೃತಿ ಬೋಧಿಸುತಾ ||3||

ಎಲೆಯ ಮರೆಯ ಹಣ್ಣಾಗದೆ
ಉಳಿಯ ಪೆಟ್ಟನು ತಾ ಸಹಿಸುತಾ
ಲಿಂಗದೇವನ ವಿಧ ವಿಧ ಪರೀಕ್ಷೆಗೆ
ಅಂಜದೆ ಅಳುಕದೆ ಎದೆಯೊಡ್ಡಿ ನಿಂತ ||4||

ಶರಣೆ.ವಿಜಯಾರಾಜು, ರಾ.ಬ.ದಳ, ಭದ್ರಾವತಿ

[ಇದನ್ನು ರತ್ನ ಸಿಕ್ಕಿತಮ್ಮ ಎನಗೆ ರತ್ನ ಸಿಕ್ಕಿತಮ್ಮ ದಾಟಿಯಲ್ಲಿ ಹಾಡಬಹುದು.]

ಶರಣ ಬಂಧುಗಳಲ್ಲಿ ಕಳಕಳಿಯ ಬಿನ್ನಹ

ಶರಣ ಕೆಲವೊಮ್ಮೆ ನನ್ನ ಅತ್ಯುತ್ಸಾಹದಿಂದ ನಮ್ಮ ಸಂಸ್ಥೆಗೆ ಹಾನಿ, ಶರಣ ಬಂಧುಗಳಿಗೆ ಹೆಚ್ಚಿನ ಭಾರ ಬೀಳುತ್ತದೇನೋ ಎಂದು ನನಗೆ ಕಳವಳವಾಗುತ್ತಿರುತ್ತದೆ. ಜನವರಿ ತಿಂಗಳಲ್ಲಿ ಶರಣ ಮೇಳ, ಮೇ ತಿಂಗಳಲ್ಲಿ ಕಲ್ಯಾಣ ಪರ್ವ - ಇವೇ ನಮ್ಮ ಶರಣರಿಗೆ ಸ್ವಲ್ಪ ಭಾರ ಎನ್ನಿಸುವಂತೆ ತೋರುತ್ತದೆ. ಗಣ ಮೇಳ ಅಂದರೆ ಶರಣ ಬಂಧುಗಳು ಎಲ್ಲರೂ ಒಂದೆಡೆ ಧಾರ್ಮಿಕವಾಗಿ ಸೇರುವಂತಹದು ಅತ್ಯಂತ ಅಗತ್ಯ. ಇದನ್ನು ಮೊದಲು ಧರ್ಮಬಂಧುಗಳು ಮನಗಾಣಬೇಕು ಲಕ್ಷಗಟ್ಟಳೆ, ಕೋಟಿಗಟ್ಟಳೆ (ಅಪ)ವ್ಯಯ ಮಾಡುವ ಅದ್ದೂರಿಯ ಜಾತಿ ಸಮಾವೇಶ, ಧಾರ್ಮಿಕ ಸಮ್ಮೇಳನಗಳನ್ನು ಹಲವು ಮಠಮಾನ್ಯ, ಸಂಘ-ಸಂಸ್ಥೆಗಳು ಏರ್ಪಡಿಸುವುದುಂಟು. ಆದರೆ ಅಲ್ಲಿ ದೊರೆಯುವ ಜ್ಞಾನ, ಸಂಸ್ಕಾರ, ತರಬೇತಿ ಎಷ್ಟು ? ಒಂದು ಪೂಜೆ-ಪ್ರಾರ್ಥನೆ ಸಹ ಇರದಷ್ಟು. ಎಷ್ಟೋ ಧಾರ್ಮಿಕ ಸಮಾವೇಶಗಳು ಭಕ್ತಿಶೂನ್ಯವಾಗಿ ನಡೆಯುವುದುಂಟು. ಒಬ್ಬರು ಮಾಡಿದ ಉಪನ್ಯಾಸ, ಬೀಜ ಬಿತ್ತಿದರೆ ಇನ್ನೊಬ್ಬರದು ಅದನ್ನು ಹರಗುವ ಪರಿಸ್ಥಿತಿ ಇರುತ್ತದೆ. ಸಂದೇಹಗಳು ಪರಿಹಾರವಾಗುವ ಬದಲಿಗೆ ಗೊಂದಲವೇ ಜಾಸ್ತಿಯಾಗಿ ಜನರು ಮಂಡೆಯನ್ನು ಬಿಸಿ ಮಾಡಿಕೊಂಡು ಬರುವ ಕಾರ್ಯಕ್ರಮಗಳಾಗುತ್ತವೆ.

ಈ ಹಿನ್ನೆಲೆಯಲ್ಲಿ ಶರಣ ಮೇಳ, ಕಲ್ಯಾಣ ಪರ್ವಗಳು ಮಹತ್ವಪೂರ್ಣ ಭಕ್ತಿಯನ್ನು ವರ್ಧಿಸುವ, ಜ್ಞಾನವನ್ನು ಬೆಳೆಸುವ ಧಾರ್ಮಿಕ ತರಬೇತಿ ನೀಡುವ ಕಾರ್ಯಾಗಾರ (Work Shop) ಕಮ್ಮಟಗಳಾಗಿ ಕೆಲಸ ಮಾಡುತ್ತವೆ. ಶರಣ ಮೇಳಕ್ಕೆ ಶರಣ ಬಂಧುಗಳು ದೇಣಿಗೆ ಸಂಗ್ರಹಿಸುವ ಆಸಕ್ತಿ ತೋರಿಸುತ್ತಾರೆ. ಮತ್ತೆ ಕೆಲವರು ಅದೂ ಹೊಂದಿರುವುದಿಲ್ಲ. ಕಲ್ಯಾಣ ಪರ್ವದ ಸಮಯದಲ್ಲಿ ಹೆಚ್ಚಿನ ಜನರು ದೇಣಿಗೆ ಸಂಗ್ರಹಿಸುವ ಉತ್ಸಾಹ ತೋರಿಸುವುದಿಲ್ಲ. ಇಂಥ ಸನ್ನಿವೇಶದಲ್ಲಿ ಮಹಾರಾಷ್ಟ್ರದ ಅಲ್ಲಮ ಪ್ರಭು ಗಿರಿಯಲ್ಲಿ ಶರಣ ಮೇಳ(ಜನವರಿ) ಮತ್ತು ಕಲ್ಯಾಣ ಪರ್ವ (ಮೇ)ದ ಮಧ್ಯೆ ಯುಗಾದಿಯ ದಿನದ ಹಿನ್ನೆಲೆಯಲ್ಲಿ ಪ್ರಥಮ ಲಿಂಗಾಯತ ಗಣ ಮೇಳ ಏರ್ಪಡಿಸಿದ್ದು ಕೆಲವರಿಗೆ ಭಾರ ಎನ್ನಿಸುತ್ತದೆ. ಗಿರಿಯ ಸುತ್ತಲಿನ ಲಿಂಗಾಯತರಲ್ಲಿ ಇನ್ನೂ ಜಾಗೃತಿ ಮೂಡಿಸುವ ಕೆಲಸ ಆಗಬೇಕಾಗಿದೆ. ಅಂಥ ಅಜಾಗ್ರತ ಸ್ಥಿತಿಯಲ್ಲಿಯೂ 7 ಕಿ.ಮೀ ಗುಡ್ಡ ಏರಿ ಜನರು ಪ್ರವಾಹದೋಪಾದಿಯಲ್ಲಿ ಬಂದುದು ಎಲ್ಲರಿಗೂ ಅಚ್ಚರಿಯನ್ನು ಉಂಟು ಮಾಡಿದೆ. ಮೊದಲನೆಯ ಗಣ ಮೇಳಕ್ಕೆ ಹೀಗೆ ಆಗಮಿಸಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಹೋಲಿಕೆಯನ್ನು ನಾನು ಕೊಟ್ಟೆ "ಶರಣ ಮೇಳ ಹೇಗೆ ಅಂದರೆ ಅಲ್ಲಲ್ಲೇ ಅರಳಿದ್ದ ಹೂವನ್ನು ಬಿಡಿಸಿ ಮಾಲೆ ಕಟ್ಟುವಂತೆ, ಪೂಜ್ಯ ಲಿಂಗಾನಂದ ಅಪ್ಪಾಜಿ, ನಾವು ಎಲ್ಲರೂ ಪ್ರವಚನದ ಮೂಲಕ ಮಾಲೆ ಕಟ್ಟಿದೆವು. ಇಲ್ಲಿ ಹಾಗಲ್ಲ; ಈಗ ಭೂಮಿಯನ್ನು ಉತ್ತು ಸಸಿ ನೆಟ್ಟು, ಹೂವು ಅರಳಿಸಬೇಕಾಗಿದೆ." ಜನತೆಯಲ್ಲಿ ಭಕ್ತಿಮಾತ್ರ ಸತ್ವಶಾಲಿಯಾಗಿದೆ. ಜನರು ಪ್ರವಾಹದಂತೆ ಬಂದರು. ಪ್ರಸಾದ ವ್ಯವಸ್ಥೆಯಂತೂ ಅತ್ಯಂತ ಅದ್ಭುತವಾಗಿ, ರುಚಿಕಟ್ಟಾಗಿ ಇತ್ತು. ಆದರೆ ಜನರನ್ನು ಜಾಗೃತಿಸಿ, ದೇಣಿಗೆ ಸಂಗ್ರಹಿಸಲು ಸಮಯದ ಕೊರತೆಯಿಂದಾಗಿ ಆಗದ್ದರಿಂದ ಬಸವ ಧರ್ಮ ಪೀಠ ಟ್ರಸ್ಟ್ ಹಣವನ್ನು ಬಡ್ಡಿಯ ಮೇಲೆ ಸಾಲ ಪಡೆದು ಉದ್ರಿ ತೀರಿಸಬೇಕಾಯಿತು. ಇದು ನನ್ನಲ್ಲಿ ತುಂಬಾ ವ್ಯಾಕುಲತೆಯನ್ನು ಹುಟ್ಟಿಸಿದೆ. ನನ್ನ ಅತ್ಯುತ್ಸಾಹ(Over entusiasm) ದಿಂದ ಸಂಸ್ಥೆಗೆ ಹಾನಿಯಾಯಿತಲ್ಲ ಎಂಬ ಕಳವಳ ಕಾಡುತ್ತಿದೆ. ಮತ್ತೊಮ್ಮೆ ಸಮಾಧಾನ ತಂದುಕೊಳ್ಳುತ್ತೇನೆ, ತಿರುಪತಿ ತಿಮ್ಮಪ್ಪ ಪದ್ಮಾವತಿಯನ್ನು ವಿವಾಹವಾಗಲು ಸಾಲ ಎತ್ತಿದನಂತೆ. ನಾನು ಶರಣ ಬಂಧುಗಳ ಸಂಘಟನೆ, ಹಿತಕ್ಕಾಗಿ ಸಾಲ ಮಾಡುತ್ತಿದ್ದೇನೆ. ಆದರೆ ತಿರುಪತಿ ತಿಮ್ಮಪ್ಪನಿಗೆ ಮೂಢ ಭಕ್ತರ ದಂಡೇ ಇದೆ. ಅವರು ಲಕ್ಷಗಟ್ಟಳೆ, ಕೋಟಿಗಟ್ಟಳೆ ಹುಂಡಿಗೆ ಹಾಕುತ್ತಾರೆ. ಆದರೆ ಹೆಚ್ಚಿನ ಲಿಂಗಾಯತರಲ್ಲಿ ಧರ್ಮಕ್ಕಾಗಿ ಕೊಡಬೇಕು ಎಂಬ ಸಾಮಾಜಿಕ ಪ್ರಜ್ಞೆಯೇ ಇಲ್ಲ; ಏನು ಮಾಡುವುದು ?

ಅಹುದು, ಶರಣ ಮೇಳ ಕಲ್ಯಾಣ ಪರ್ವದ ಮಧ್ಯೆ ಮತ್ತೊಂದು ಸಮ್ಮೇಳನದ ಅಗತ್ಯವಿತ್ತೆ? ನಿಜ, ಖಂಡಿತಾ ಅಗತ್ಯವಿದೆ. ಲಿಂಗಾಯತ ಸಮಾಜ ಅಜ್ಞಾನ, ಅಸಂಸ್ಕಾರ, ಅಸಂಘಟನೆಯಿಂದ ಬಳಲುತ್ತಿದೆ.

ಬೇಗ ಬೇಗನೆ ವ್ಯಾಪಕವಾಗಿ ಜಾಗೃತಿ ಕಾರ್ಯ, ಸಂಘಟನಾ ಕೆಲಸ ಆಗಲೇಬೇಕಾಗಿದೆ. ಮೇ ನಂತರ ಮಳೆಗಾಲ ಶುರುವಾಗುತ್ತದೆ. ಆಗ ಅಲ್ಲಮಪ್ರಭುಗಿರಿಯಲ್ಲಿ ಎರೆಮಣ್ಣಾದ್ದರಿಂದ ನಡೆದಾಡಲು ಸಹ ಸಾಧ್ಯವಾಗದು. ಇಂಥ ಎಲ್ಲ ತುಡಿತ, ಒತ್ತಡಗಳಿಂದಾಗಿ ಗಣ ಮೇಳವನ್ನು ಮಾಡಲೇ ಬೇಕಾಗುತ್ತದೆ.

ಈಗ ಮುಂದೆ ನಿಂತಿರುವುದು ಕಲ್ಯಾಣ ಪರ್ವ. ಅದಕ್ಕೆ ಸಿದ್ಧತೆ ಮಾಡಲು ಕಾಣಿಕೆ ಸಂಗ್ರಹಿಸಲು ನಿರತವಾಗಬೇಕಿದ್ದ ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಅಲ್ಲಮಪ್ರಭುಗಿರಿಯಲ್ಲಿ ಗಣ ಮೇಳಕ್ಕಾಗಿ ದುಡಿಯಬೇಕಾಯಿತು. ಆದ್ದರಿಂದ ಶರಣ ಬಂಧುಗಳೇ ಈಗ ತಾವು ಮನಸ್ಸು ಮಾಡಬೇಕು. ಕಲ್ಯಾಣ ಪರ್ವಕ್ಕಾಗಿ ನೀವು ಸಂಗ್ರಹಿಸುವಾಗ ಕೇಳುವುದು ದೊಡ್ಡ ದೊಡ್ಡ ಮೊತ್ತವನ್ನೇನೂ ಅಲ್ಲ. ಆದ್ದರಿಂದ ಉದಾಸೀನ ಮಾಡದೆ ನಿಮ್ಮ ಮನೆಯದೇ ಕೆಲಸ ಎಂದು ಭಾವಿಸಿ ದೇಣಿಗೆ ರಸೀತಿ ತರಿಸಿಕೊಂಡು ಸಂಗ್ರಹಿಸಿರಿ. ಮತ್ತು ಸ್ವತಃ ನೀವು ಕಡ್ಡಾಯವಾಗಿ ಹಣವನ್ನು ಉಳಿತಾಯ ಮಾಡಿ, ಅಥವಾ ಹುಂಡಿಯಲ್ಲಿ ಹಾಕಿ, ಮುಡಿಪು ಎಂದು ತೆಗೆದಿಟ್ಟು ಕಲ್ಯಾಣ ಪರ್ವಕ್ಕೆ ತರುವ ಕೊಡುವ ಅನಿವಾರ್ಯ ಕಾರಣದಿಂದ ಬರಲು ಆಗದೆ ಇದ್ದರೆ ಬರುವವರ ಸಂಗಡ ಕಳಿಸುವ, ಅಥವಾ ಎಂ.ಓ/ಡಿ.ಡಿ ಮುಖಾಂತರ ಕಳಿಸುವ ಸಂಕಲ್ಪ ತೊಡಿರಿ.

ಆದಿ ಶರಣರಿಗೆ ಉಣ್ಣಿಸಬೇಕು ಎಂಬ ಆಸೆ ನಿಮ್ಮದಾಗಿದ್ದರೆ ಶರಣ ಬಂಧುಗಳಿಗೆ ಉಣ್ಣಿಸುವ ಮೂಲಕ ಆ ಆಸೆಯನ್ನು ತೃಪ್ತಿಮಾಡಿಕೊಳ್ಳಬೇಕು. ಕಳೆದ ಕಲ್ಯಾಣಪರ್ವಕ್ಕೆ ದೇಣಿಗೆ ಸಂಗ್ರಹಿಸುವಾಗ ಬೀದರ, ಗುಲಬರ್ಗಾ, ಹೈದರಾಬಾದ್ ಶರಣ ಬಂಧುಗಳು ಮತ್ತು ಇನ್ನು ಕೆಲವು ಊರುಗಳವರು ವೈಯಕ್ತಿಕವಾಗಿ ಪ್ರತಿ ವರ್ಷ ಇಷ್ಟು ಕೊಡುತ್ತೇವೆ ಎಂದು ಸಂಕಲ್ಪ ಮಾಡಿ, ಕೊಟ್ಟಿದ್ದಾರೆ. ಈ ಸಲ ಸಮಯಾಭಾವ ಬಹಳವಾಗಿದೆ. ನಮ್ಮ ಸಂಸ್ಥೆಯ ಜಂಗಮ ಮೂರ್ತಿಗಳಿಗೆ ಬರಲು ಸಮಯ ಸಿಕ್ಕದೆ ಇದ್ದರೆ ಆಗ ಅವರೆಲ್ಲರೂ ಸ್ವಯಂ ಪ್ರೇರಣೆಯಿಂದ ತಂದು ಸಲ್ಲಿಸಬೇಕೆಂದು ಆತ್ಮೀಯವಾಗಿ ಸೂಚಿಸುತ್ತಿದ್ದೇನೆ.

-ಮಾತಾಜಿ

---

1 ಸೊಲ್ಲಾಪುರದಲ್ಲಿ ಪ್ರವಚನ ಮಂಗಲ ಸಮಾರಂಭ

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಜಗದ್ಗುರುಗಳಾದ ಪೂಜ್ಯ ಮಾತೆ ಗಂಗಾದೇವರಿ ಅವರು ಭವಾನಿ ಪೇಟೆಯಲ್ಲಿರುವ ಜೈ ಭವಾನಿ ಪಾರ್ಕ್ ಆವರಣದಲ್ಲಿ ದಿ.26-1-2006 ರಂದು ವಿಶ್ವಧರ್ಮ ಪ್ರವಚನವನ್ನು ಆರಂಭಿಸಿ 60 ದಿವಸಗಳ ಕಾಲ ಅವ್ಯಾಹತವಾಗಿ ಪ್ರವಚನ ಮಾಡಿದರು. ಪ್ರವಚನದ ಮಂಗಲ ಸಮಾರಂಭವು ದಿ.26-3-2006ರಂದು ಏರ್ಪಾಡಾಗಿದ್ದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನೆರವೇರಿತು.

ಸೊಲ್ಲಾಪುರದ ಬಿಜಾಪುರ ರಸ್ತೆಯಲ್ಲಿರುವ ರೇವಣ ಸಿದ್ದೇಶ್ವರ ದೇವಾಲಯದ ಬಯಲಲ್ಲಿ ದಿ.3-4-2006 ರಂದು ಆರಂಭಿಸಿ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು 4 ವಾರಗಳ ಕಾಲ ಪ್ರವಚನವನ್ನು ಮಾಡಲಿದ್ದಾರೆ.

2.ನೆಲಮಂಗಲದಲ್ಲಿ ಅದ್ದೂರಿಯಾಗಿ ನಡೆದ ಅಲ್ಲಮಪ್ರಭು ಸ್ವಾಮಿಗಳ ಪ್ರವಚನ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ನಗರದ ಬಸ್ ಸ್ಟಾಂಡ್ ಸಮೀಪವಿರುವ ಗುರುಭವನದ ಆವರಣದಲ್ಲಿ ದಿ.24-2-2006ರಂದು ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳ ಪ್ರವಚನ ಆರಂಭವಾಗಿ 46ದಿವಸಗಳ ಕಾಲ ಪ್ರತಿನಿತ್ಯ ಸಂಜೆ 6-30ರಿಂದ ಅವ್ಯಾಹತವಾಗಿ ನಡೆಯಿತು. ದಿ.5-4-2006 ರಂದು ಆಗಮಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಭಕ್ತಿಪೂರ್ವಕವಾಗಿ ಸ್ವಾಗತಿಸಿ ಮೆರವಣಿಗೆಯ ಮೂಲಕ ಹೂವಿನಿಂದ ಅಲಂಕೃತವಾದ ಟ್ರಾಕ್ಟರಿನಲ್ಲಿ ವೇದಿಕೆಗೆ ಕರೆತರಲಾಯಿತು. ಕಾರ್ಯಕ್ರಮದ ಉದ್ಘಾಟಕರಾಗಿ ಮಾಜಿ ಸಚಿವರು ಮತ್ತು ಹಾಲಿ ಶಾಸಕರೂ ಆದ ಅಂಜನಮೂರ್ತಿಯವರು ಆಗಮಿಸಿದ್ದರು. ಪ್ರವಚನವು ದಿ.9-4-2006ರಂದು ಸಮಾರೋಪಗೊಂಡಿತು.

-ಮಾತಾಜಿ

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಐದನೆಯ

ಕಲ್ಯಾಣ ಪರ್ವ

2006 ರ ಮೇ 6, 7 ಮತ್ತು 8 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 19ನೆಯ ಶರಣ ಮೇಳವು ಇದೇ ತಾನೆ 2006ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy Land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ " ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು. ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿದೆ. ನಾಲ್ಕನೆಯ ಕಲ್ಯಾಣ ಪರ್ವವನ್ನು 2005ನೆಯ ಇಸವಿಯ ಮೇ 1,2 ಮತ್ತು 3 ರಂದು ನಡೆಸಲಾಯಿತು. 2006ನೆಯ ಇಸವಿಯ ಬಸವ ಜಯಂತಿಯು ಏಪ್ರಿಲ್ 30 ರಂದು

ಒದಗಿ ಬಂದಿರುವುದರಿಂದ ಸ್ಥಳೀಯವಾಗಿ ಬಸವ ಜಯಂತಿ ಆಚರಿಸಿ, ಬಸವಕಲ್ಯಾಣಕ್ಕೆ ಮೇ 1ರಂದು ಬರಲು ಜನರಿಗೆ ಸಾಧ್ಯವಾಗದೆ ಇರುವುದರಿಂದ 5 ನೆಯ ಕಲ್ಯಾಣ ಪರ್ವವನ್ನು 2006 ರ ಮೇ 6,7 ಮತ್ತು 8ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare State) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಮೇ 5 ರ ರಾತ್ರಿಯಿಂದ ಮೇ 9 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ
6. ಪ್ರತಿನಿಧಿ ಶುಲ್ಕ	: 100 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (ಊ.ಈ) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ. ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನ ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ:
ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ :080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎ : 08481-251921/252856

☹ ಸಮಸ್ಯೆ..? – ಸಮಾಧಾನ..! ☺

ಗೊ.ರು.ಪರಮೇಶ್ವರಪ್ಪ, ಗೊಂಡೇನಹಳ್ಳಿ

? ಈ ಸಲದ ಶರಣ ಮೇಳಕ್ಕೆ ಬಂದಿದ್ದೆ; ಕಂಡು ಬಹಳ ಸಂತೋಷವಾಯಿತು. ಸಾಮೂಹಿಕ ಇಷ್ಟಲಿಂಗಾರ್ಚನೆ ನೋಡಿ ಜೀವನ ಧನ್ಯ ಎನ್ನಿಸಿತು. ಆದರೆ ಸಮೀಪದಲ್ಲೇ ಚಪ್ಪಲಿಗಳನ್ನು ಬಿಟ್ಟುದು ತುಂಬಾ ಮುಜುಗರ ತಂದಿತು. ಇದು ಸರಿಯೆ?

★ ಸಹಸ್ರಾರು ಜನರಿಗೆ ಒಟ್ಟಾಗಿ ಇಷ್ಟಲಿಂಗಪೂಜೆಯನ್ನು ನಾವು ಕಲಿಸಬೇಕಾಗಿದೆ. ಪೂಜೆಗೆ ಬರುವಾಗ ದಾರಿಯಲ್ಲಿ ಮುಳ್ಳು ತುಳಿಯಬಹುದು; ಕಲ್ಲು ಒತ್ತಬಹುದು. ಹೀಗಾಗಿ ಚಪ್ಪಲಿ ಧರಿಸಿ ಜನರು ಬರುತ್ತಾರೆ. ಅಷ್ಟು ಪ್ರಮಾಣದಲ್ಲಿ ಬಂದಾಗ ಅವರ ಚಪ್ಪಲಿ ಒಂದು ಕಡೆ ಬಿಟ್ಟು, ಹೋಗುವಾಗ ಒಮ್ಮೆಲೇ ವಿತರಿಸುವುದು ತುಂಬಾ ಕಷ್ಟಕರ. ಹೀಗಾಗಿ ಅವರು ತಮ್ಮ ಗಮನದಲ್ಲಿ ಇರುವಂತೆ ಬಿಟ್ಟುಕೊಂಡಿರುತ್ತಾರೆ. ಇದು ಅಪರಿಹಾರ್ಯವಾಗಿದೆ.

ವೀರೇಶ ತಿಮ್ಮಪ್ಪಯ್ಯನ ಹಳ್ಳಿ, ಬೆಂಗಳೂರು

? ಕೆಲವರು ಚಪ್ಪಲಿ ಧರಿಸದೆ ಗುರುಗಳ ದರ್ಶನಕ್ಕೆ ಹೋದರೆ ಮಡಿ, ಧರಿಸಿದರೆ ಮೈಲಿಗೆ, ಗುಡಿಗೆ ಎಡೆ ಒಯ್ಯುವಾಗ ಚಪ್ಪಲಿ ಧರಿಸಬಾರದು, ಆಯ್ಯಪ್ಪ ವ್ರತ ಧರಿಸಿರುವಾಗ ಚಪ್ಪಲಿ ಧರಿಸಬಾರದು ಎನ್ನುತ್ತಾರಲ್ಲ. ಇದು ಸರಿಯೆ?

★ ಚಪ್ಪಲಿ ಚರ್ಮದ ವಸ್ತು ಮೈಲಿಗೆ; ಅದಕ್ಕಾಗಿ ಚಪ್ಪಲಿ ಮಾಡುವ ಚರ್ಮಕಾರ ಅಸ್ಪೃಶ್ಯ. ಇದೆಲ್ಲವೂ ಭಾರತೀಯರಲ್ಲಿ ತುಂಬಿರುವ ನಂಬಿಕೆಗಳು. ನಮ್ಮ ಧರ್ಮಪಿತರು ಮಾತ್ರ, ಚಮ್ಮಾವುಗೆಯನ್ನು ತಲೆಯ ಮೇಲೆ ಹೊತ್ತರು. ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದಯ್ಯಾ ಎಂದರು. ಕ್ರಾಂತಿಕವಿ ಸರ್ವಜ್ಞ "ಚಪ್ಪಲಿ ಧರಿಸದೆ, ಬರಿಗಾಲಿನಿಂದ ನಡೆಯುವವನ ಕೆರದಲ್ಲಿ ಹೊಡಿ." ಎಂದುಬಿಟ್ಟ. ಇಂದು ವೈದ್ಯರು ಮಧುಮೇಹ ಇದ್ದವರಿಗೆ ತಲೆಗಿಂತಲೂ ಕಾಲಿನ ಕಡೆಗೆ ಹೆಚ್ಚಿನ ಗಮನ ಕೊಡಿ ಎನ್ನುತ್ತಾರೆ. ಬರಿಗಾಲಿನಿಂದ ನಡೆಯುವಾಗ ಉಗುಳು, ಮಲಮೂತ್ರಗಳನ್ನು ತುಳಿಯುವುದಷ್ಟೇ ಅಲ್ಲ ಕಲ್ಲು, ಮುಳ್ಳು, ಗಾಜು, ಕಬ್ಬಿಣ ಇತ್ಯಾದಿ ತುಳಿದು ನಂಜಿಗೆ ಒಳಗಾಗಿ ಕಾಲುಗಳನ್ನೇ ತೆಗೆಯುವಂತಹ ಪ್ರಸಂಗ ಬರಬಹುದು. ಮೈಗೆ ಬಟ್ಟೆ ಹೊದೆಯದಿದ್ದರೂ ಪರವಾಗಿಲ್ಲ ಸರ್ವಜ್ಞ ಚಪ್ಪಲಿ ಹಾಕುವುದು ಮರೆಯಲಿಲ್ಲ ಎಂಬುದು ಗಮನಾರ್ಹ. ಶುಚಿತ್ವದ ದೃಷ್ಟಿಯಿಂದ ಚಪ್ಪಲಿ ಧರಿಸುವುದರಿಂದ ವ್ರತಕ್ಕೆ, ಮಡಿಗೆ ಭಂಗವೇನೂ ಬರದು.

ಮಲ್ಲಿಕಾರ್ಜುನ ಡೋಣಗಾಪುರ, ಭಾಲ್ಕಿ ಮತ್ತು ಬೈಲಹೊಂಗಲದ ರಾಮನಗೌಡ

? ಒಡನಿರ್ದ ಸತಿ ಎಂಬ ಧರ್ಮಪಿತರ ವಚನದಲ್ಲಿ "ತೆಗೆದುಕೊಡೆ ಎಲೆ ಚಂಡಾಲಗಿತ್ತಿ" ಎಂದಿದೆ. ಧರ್ಮಗುರು ಬಸವಣ್ಣನವರ ಬಾಯಲ್ಲಿ ಅಂಥ ಪದ ಬರಲು ಸಾಧ್ಯವಿಲ್ಲ. ಆದ್ದರಿಂದ ಹೀಗೆ ಅವರು ಅಂದಿರಲಾರರು. ಅದು "ತೆಗೆದುಕೊಡೆ ಬೆಂಡೋಲೆಕಿತ್ತಿ" ಎಂದಿರಬಹುದು ಎಂದು ಒಂದು ಕಡೆ ಚೇಲಿಮಠದ ಪೂಜ್ಯ ಸ್ವಾಮಿಗಳು ವಿವರಿಸಿದ್ದಾರೆ. ಅದೇ ಸರಿ ಇರಬಹುದು ಅನ್ನಿಸುತ್ತದೆ. ನಿಮ್ಮ ಅನಿಸಿಕೆ ಏನು?

★ ಬೇರೆ ಬೇರೆ ದಿಕ್ಕಿನ ಎರಡು ಊರುಗಳ ಇಬ್ಬರು ಶರಣರಿಂದ ಒಂದೇ ರೀತಿಯ ಪ್ರಶ್ನೆ ಬಂದಿದೆ. ಕೆಲವು ಕಡೆ ಅರ್ಥಕ್ಕೆ ಚ್ಯುತಿ ಬಂದಿದೆ ಎಂದು ನಾನು ಹೀಗೆ ಬದಲಾವಣೆ ಮಾಡಿದ್ದೇನೆ. "ಮರೆಯಲಾಗದು ಬ್ರಹ್ಮನ" ಬದಲಿಗೆ "ಮೆರೆಯಲಾಗದು ಬ್ರಹ್ಮನ", "ಊಡದ ಆವಿಂಗೆ" ಬದಲು "ಕ್ಷಡೆದ ಆವಿಂಗೆ", "ಅಯ್ಯಾ ಹಿಂದೆ ಆನು ಮಾಡಿದ ಮರಹಿಂದ" ಬದಲಿಗೆ "ಅಯ್ಯಾ, ಹಿಂದೆ ಆನು ಮಾಡಿದ ಮೆರಹಿಂದ", ಇಲ್ಲಿ ಅಗದಿ ಸಣ್ಣ ಬದಲಾವಣೆಯಿಂದ ಬಹುದೊಡ್ಡ ಮತ್ತು ಸೂಕ್ತ ಅರ್ಥ ಬರುತ್ತದೆ.

ಚಾಂಡಾಲಗಿತ್ತಿ ಬದಲು ಬೆಂಡೋಲೆ ಕಿತ್ತಿ ಎಂಬುದರಲ್ಲಿ ವಿಪರೀತವಾದ ಬದಲಾವಣೆಗಳಿವೆ;

ಎಂಬ ಪದದ ತಪ್ಪು ಬಳಕೆ ಶಿವಮೊಗ್ಗ ಕಡೆಯ ಜನರು ಈ ಬಂದು ಬಟ್ಟ ಕಿತ್ತಿ ಎಂಬ ಪದ ಕಿತ್ತು ಎಂಬ ಪದದ ತಪ್ಪು ಬಳಕೆ. ಮಾಡುವವರಲ್ಲ. ಕಳ್ಳನು ಕಿತ್ತು ಕಿತ್ತ ಹೀಗೆ ಅನ್ನುತ್ತಾರೆ. ಬಸವಣ್ಣನವರು ಕನ್ನಡದ ತಪ್ಪು ಬಳಕೆ. ಕೊಡುತ್ತಾರೆಯೇ ವಿನಾ 'ಕಿತ್ತು' ತೆಗೆದುಕೊಳ್ಳುತ್ತಾನೆ. ತಾವಾಗಿಯೇ ತೆಗೆಯುವವರು ಬಿಚ್ಚಿ ಕೊಡುತ್ತಾರೆಯೇ ವಿನಾ 'ಕಿತ್ತು' ತೆಗೆದುಕೊಳ್ಳುತ್ತಾನೆ. ತಾವಾಗಿಯೇ ತೆಗೆಯುವವರು ಬಿಚ್ಚಿ ಅರ್ಥಮಾಡುವುದು ನನಗೆ ಸೂಕ್ತವೆನಿಸದು. ಕೊಡುವುದಿಲ್ಲ. ಆದ್ದರಿಂದ ತುಂಬಾ ಕಷ್ಟಪಟ್ಟು ಎಳೆದು ಅರ್ಥಮಾಡುವುದು ನನಗೆ ಸೂಕ್ತವೆನಿಸದು.

"ತೆಗೆದುಕೊಡೆ ಎಲೆ ಚಂಡಾಲಗಿತ್ತಿ" (ಆ ಮಹಾತಾಯಿಯನ್ನು ಹೀಗೆ ಸಂಬೋಧಿಸುವ ಹಕ್ಕು ನಮಗಿಲ್ಲ. ಅದು ನಮಗೆ ಪಾಪಕಾರಕ) ಎಂದು ಧರ್ಮಪಿತರು ಅತ್ಯಂತ ಕೋಪದಿಂದ ನುಡಿದಿರುವುದರ ಹಿಂದಿನ ಭಾವವನ್ನು ನಾವು ಅರಿತು ಅದರ ಹಿಂದಿನ ಮಾನವೀಯ ಹೃದಯದ ಮಿತವನ್ನು ಅನುಭವಿಸಬೇಕೇ ವಿನಾ ಶಬ್ದಶಃ ಅರ್ಥವನ್ನು ಮಾಡಬಾರದು. ಇನ್ನೊಂದು ವಚನದಲ್ಲಿ(ಸಾಕ್ಷಾತ್ಕಾರಕ್ಕೂ ಮೊದಲು ಬರೆದುದು) ಶಿವನಲ್ಲದೆ ಅನ್ಯದೈವ ಉಂಟೆಂಬವನ ಕೆನ್ನೆವಾರೆ ಸೀಳಿದಲ್ಲದೆ ನನ್ನ ಕೋಪವಡಗದು." ಎನ್ನುತ್ತಾರೆ ಧರ್ಮಪಿತರು. ಹಾಗಾದರೆ ಅವರು ಕೊಲೆಗಡುಕರೆ ? ಅವರಿಗೆ ಅದೆಷ್ಟು ಕೋಪ ಬಂದಿರಬಹುದು ಎಂದು ಈ ಪದದ ಮೂಲಕ ಅಳೆಯಬೇಕು ಅಷ್ಟೆ.

ಕೆಲವರು ಅರ್ಥರಹಿತವಾಗಿ ಮುಜುಗರ ಪಡುತ್ತಾರೆ. ನಾನು ತರಂಗಿಣಿ ಪುಸ್ತಕಕ್ಕೆ ಮುಖಪುಟ ಬರೆಸುವಾಗ ಕಲಾವಿದರ ಕಲಾಶಾಲೆಗೆ 3 ತಿಂಗಳು ಅಡ್ಡಾಡಿದೆ. ಪ್ರತಿಯೊಂದು ಸಹಜವಾಗಿ, ಪ್ರಮಾಣಬದ್ಧವಾಗಿ ಇರಬೇಕು ಎಂದು ತಿದ್ದಿಸುತ್ತಿದ್ದೆ. ನನಗಂತೂ ಆ ಚಿತ್ರ ತುಂಬಾ ಸಂತೋಷಕೊಟ್ಟಿತು. ಅಕ್ಕಮಹಾದೇವಿಯ ಆಂತರಂಗಿಕ ವ್ಯಕ್ತಿತ್ವ ಆ ಚಿತ್ರದ ಮುಖ, ಕಣ್ಣು, ಹುಬ್ಬು ತುಟಿ ಎಲ್ಲದರಲ್ಲೂ ಅಭಿವ್ಯಕ್ತಗೊಂಡಿದೆ. ನಮ್ಮನ್ನು ಸದಾ ಟೀಕಿಸುವ, ದ್ವೇಷಿಸುವ ಓರ್ವ ವ್ಯಕ್ತಿ "ಅಕ್ಕಮಹಾದೇವಿಯನ್ನು ಪೂರ್ತಿ ಬೆತ್ತಲೆ ಮಾಡಬೇಕಿತ್ತು". ಎಂದು ವ್ಯಂಗ್ಯ ವಾಡಿದರು. ಕೆಲವು ಕಲಾವಿದರು ತಾವೇ ಮುಜುಗರಪಟ್ಟು ಅಕ್ಕಮಹಾದೇವಿಗೆ ಕೂದಲನ್ನು ಕಂಬಳಿಯಂತೆ ದಟ್ಟವಾಗಿ ಮುಚ್ಚುತ್ತಾರೆ. ಮತ್ತೋರ್ವ ಕಲಾವಿದ ಗಿಡ ಮರ ಬಳ್ಳಿ ಹೂಗಳ ನಡುವೆ ಅಕ್ಕಮಹಾದೇವಿಯನ್ನು ಕುಳ್ಳಿರಿಸಿ, ಅಕ್ಕನನ್ನು ಎಲ್ಲಿದ್ದಾಳೆ ಎಂದು ಹುಡುಕುವಂತೆ ಚಿತ್ರ ಬರೆದಿದ್ದಾರೆ. ತರಂಗಿಣಿಯ ಮೇಲಿರುವ ಫೋಟೋ ಮುಂದೆ ಇಟ್ಟುಕೊಂಡಾಗ ನಿಮ್ಮ ಕಣ್ಣು, ಮನ, ಬುದ್ಧಿಗಳನ್ನೆಲ್ಲ ಅಕ್ಕನ ಮುಖ ಭಾವ ಸೆಳೆದು ನಿಲ್ಲಿಸುತ್ತದೆ. ಬೇರೆ ಅಂಗಾಂಗಗಳ ಕಡೆಗೆ ನಿಮ್ಮ ದೃಷ್ಟಿ ಹರಿಯುವುದೇ ಇಲ್ಲ. ಗೋಮಟೇಶ್ವರನು ಬತ್ತಲೆ ಇದ್ದಾನೆ. ಆದರೆ ಯಾರಿಗೂ ಅವನ ಮೂರ್ತಿ ನೋಡಿದಾಗ ವಿಕಾರ ಉಂಟಾಗದು. ಏಕೆಂದರೆ ಆ ಮುಖದ ಗಾಂಭೀರ್ಯ, ತ್ಯಾಗ, ನಿರ್ವಿಕಾರತೆ ವ್ಯಕ್ತಿಯನ್ನು ಮಂತ್ರಮುಗ್ಧಗೊಳಿಸುತ್ತದೆ. ಹಾಗೆ ಅಕ್ಕಮಹಾದೇವಿಯ ದಿಗಂಬರತೆ ಎಂಥ ಕೀಳು ಮನುಷ್ಯನನ್ನೂ ದೈವೀಕರಿಸುತ್ತದೆ. ಮಗುವನ್ನು "ಲೇ ಕಳ್ಳ" ಎಂದಾಗ ಶಬ್ದಶಃ ಹೇಗೆ ಅರ್ಥ ಮಾಡದೆ ಅದರ ಹಿಂದಿನ ಪ್ರೀತಿಯ ಮನೋಭಾವ ಗುರುತಿಸುವಿರೋ ಹಾಗೆ "ಚಂಡಾಲಗಿತ್ತಿ" ಎಂಬ ಪದದಲ್ಲಿ ಬಸವಣ್ಣನವರ ಮಾನವೀಯ ಹೃದಯದ ಸ್ಪಂದನ, ಕಳ್ಳನ ಬಡತನದ ಕರಾಳ ಸ್ಥಿತಿಯ ಬಗ್ಗೆ ಬಸವಣ್ಣನವರಿಗಿದ್ದ ಮರುಕ ಗುರುತಿಸಬೇಕು.

ಆರ್.ಎಸ್.ಪಾಟೀಲ್, ಸಿಂಧನೂರು

? ಕಲ್ಯಾಣ ಕಿರಣ ಜಗಳ ಗಂಟ ಪತ್ರಿಕೆ, ನಿಮ್ಮನ್ನು ಜಗಳ ಗಂಟ ಎನ್ನಬೇಕಾಗುತ್ತದೆ. ಏಕೆಂದರೆ ಯಾವಾಗಲೂ ಪತ್ರಿಕೆಯಲ್ಲಿ ಅನ್ಯರ ನಿಂದೆ ಇರುತ್ತದೆ. ಬಸವ ಪಥದಲ್ಲಿ(ಮಾರ್ಚ್) ಎಷ್ಟು ಸೌಮ್ಯವಾಗಿ ಬರೆದಿದ್ದಾರೆ ನೋಡಿ!

★ ನಿಂದೆ ಬೇರೆ, ವಿಮರ್ಶೆ ಬೇರೆ. ಒಬ್ಬ ವ್ಯಕ್ತಿಯ ವೈಯಕ್ತಿಕ ಲೋಪ ದೋಷ, ಅನ್ಯರ ಸಂಸ್ಥೆಯ ಆಂತರಿಕ ದೋಷಗಳನ್ನು ಎತ್ತಿ ಆಡಿದರೆ ಅದು ನಿಂದೆ. ಒಂದು ಪುಸ್ತಕವನ್ನು, ಲೇಖನವನ್ನು ವಿಚಾರಧಾರೆಯನ್ನು ವಿಶ್ಲೇಷಿಸಿದರೆ ಅದು ವಿಮರ್ಶೆಯೇ ವಿನಾ ನಿಂದೆಯಲ್ಲ. ಅನುಭವ ಮಂಟಪದಲ್ಲಿ ಎಷ್ಟು ತೀಕ್ಷ್ಣವಾಗಿ ಚರ್ಚೆ ನಡೆಯುತ್ತಿತ್ತು! ಅಕ್ಕಮಹಾದೇವಿ ಬಂದಾಗ ಅಲ್ಲಮಪ್ರಭುಗಳು ಎಂತಹ ಕಟುವಾದ ಪ್ರಶ್ನೆ ಕೇಳಿದರು. ತಾತ್ತ್ವಿಕ ನೆಲೆಯನ್ನು ದಾಟ ವೈಯಕ್ತಿಕ ವಿಷಯಗಳನ್ನು ಕೇಳಿದರು. ಹಾಗಾದರೆ ಅಲ್ಲಮ ಪ್ರಭುದೇವರನ್ನು ಜಗಳಗಂಟರೆಂದು, ಅನುಭವ ಮಂಟಪವನ್ನು ಜಗಳಗಂಟ ಸಂಸ್ಥೆಯೆಂದು ಕರೆಯಲಾದೀತೆ? ರೂಢಿಗೊಂಡಿದ್ದ ಮೂಢ ನಂಬಿಕೆ, ಜಾತೀಯತೆಯನ್ನು ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದಲ್ಲಿ, ಅತ್ಯಂತ ತೀಕ್ಷ್ಣವಾಗಿ ಶರಣರು ಖಂಡಿಸಿದ್ದಾರೆ. ಹಾಗಾದರೆ ವಚನ ಸಾಹಿತ್ಯವನ್ನು ನಿಂದಾ ಸಾಹಿತ್ಯ, ಜಗಳಗಂಟ ಸಾಹಿತ್ಯ ಎನ್ನಬಹುದೆ? ಧೋರಣೆ ಎಲ್ಲ ಹುಳುಕನ್ನು ಒಳಗಿಟ್ಟು ತಿಪ್ಪೆಸಾರಿಸುವ " ನ ಭ್ರೂಯಾತ್ ಸತ್ಯಮ್ ಅಪ್ರಿಯಮ್" [ಕಹಿಯಾದ ಸತ್ಯವನ್ನು ಹೇಳಬೇಡ] ಎಂಬ ವೈದಿಕ ಸಾಹಿತ್ಯದಂತಲ್ಲ. "ಎಷ್ಟೇ ಕಹಿ ಇದ್ದರೂ ಸತ್ಯವನ್ನೇ ಹೇಳು; ಅಧರಕ್ಕೆ ಕಹಿ ಉದರಕ್ಕೆ ಸಿಹಿ; ಶರಣರ ವಚನ ಬೇವ ಸವಿದಂತೆ "ಎನ್ನುತ್ತದೆ ಧರ್ಮಪಿತರ ವಾಣಿ. "ಛಲ ಬೇಕು ಶರಣಂಗೆ ಪರವಾದಿ ನಿಗ್ರಹದಲ್ಲಿ" ಎನ್ನುತ್ತದೆ ಬಸವಾದೇಶ. " ಶರಣರು ಜೀವ ಭಯದಿಂದ ಚನ್ನಬಸವಣ್ಣನವರು ಮತ್ತು ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ಉಳವಿಗೆ ಹೋದರು" ಎಂದು ಬಸವ ಸಮಿತಿಯ ಬಸವ ದಿನಚರಿ - 2006ಯಲ್ಲಿ ಬರೆದುದು ಸರಿಯೆ ? ಎಂದು ಕಲ್ಯಾಣ ಕಿರಣ ಪ್ರಶ್ನಿಸಿದಾಗ ಅದಕ್ಕೆ 'ಚ'ಕಾರದ ಉತ್ತರವನ್ನೂ ನೀಡದ ಪಲಾಯನವಾದವೇ ನಿಮ್ಮ ದೃಷ್ಟಿಯಲ್ಲಿ ಸೌಮ್ಯತೆ ಆಗಿದ್ದರೆ ಅಂಥ ನಿರ್ಜೀವ ಸೌಮ್ಯತೆ ನಮಗೆ ಬೇಡ. ಬೌದ್ಧಿಕ ಪ್ರಾಮಾಣಿಕತೆ ಇಲ್ಲದ ನಿಮ್ಮಂತಹವರಿಗೇ ಇರಲಿ ಅಂಥ ಸೌಮ್ಯತೆ!

ಬಸವ ಭಾಗ್ಯ, ಶಿವಮೊಗ್ಗ

ಪ್ರ:1 ? ಬಸವ ವಚನ ದೀಪ್ತಿ ವ.450ರಲ್ಲಿ ಎನ್ನ ರಾಣಿವಾಸದಾಣೆ ಎಂದಿದೆ. ಬೇರೆ ವಚನ ಗ್ರಂಥಗಳಲ್ಲಿ ನಿಮ್ಮ ರಾಣಿವಾಸದಾಣೆ ಎಂದಿದೆ. ಏಕೆ ?

★ ಸೃಷ್ಟಿಕರ್ತನಿಗೆ ಆಕಾರವಿಲ್ಲ, ಸತಿ ಸುತ, ಮಾತಾ ಪಿತರಿಲ್ಲ ಅಂದಾಗ ನಿಮ್ಮ ರಾಣಿ ವಾಸ ಹೇಗಿರಲು ಸಾಧ್ಯ ? ವ್ಯಕ್ತಿ ಮಾತನಾಡುವಾಗ ನನ್ನ ಹೆಂಡತಿ ಆಣೆ, ನನ್ನ ಮಕ್ಕಳ ಆಣೆ ಎನ್ನುವ ರೂಢಿ ಇದೆ. ನನ್ನ ರಾಣಿ ವಾಸದಾಣೆ ಎಂದರೆ ನನ್ನ ಹೆಂಡತಿಯ ಆಣೆ ಎಂದರ್ಥ. ಅದಕ್ಕೆ ನನ್ನ ಸಂಗ್ರಹ ಕೃತಿಯಲ್ಲಿ ಎನ್ನ ರಾಣಿವಾಸದಾಣೆ ಎಂದಿದ್ದೇನೆ.

ಪ್ರ:2 ಅದೇ ಬ.ವ.ದೀಪ್ತಿಯ ವಚನ 890 ಮತ್ತು 893ರಲ್ಲಿ ನಿಮ್ಮ ರಾಣಿ ವಾಸದಾಣೆ ಎಂದಿದೆ. ಏಕೆ?

★ ಧರ್ಮಪಿತರ ವಚನಗಳ ಸಂಗ್ರಹ ಪ್ರಕಾಶಿಸಬೇಕೆಂದು ವಚನ ಗ್ರಂಥ ಸಿದ್ಧಪಡಿಸುತ್ತಿದ್ದೆ. ಒಬ್ಬರು ಡಿ.ಟಿ.ಪಿ. ಮಾಡುತ್ತಲಿದ್ದರು ಪ್ರೂಫ್ ನೋಡಿ ಆಗಿತ್ತು. ಹಾಗೆಯೇ ಆಲೋಚಿಸುತ್ತಲಿರುವಾಗ ದೇವರಿಗೆ ನಿನ್ನ ರಾಣಿವಾಸದಾಣೆ ಎಂಬುದು ತಾತ್ತ್ವಿಕವಾಗಿ ತಪ್ಪು ಎನ್ನಿಸಿ "ಎನ್ನ ರಾಣಿವಾಸದಾಣೆ" ಎಂದು ಅತ್ಯಂತ ಪರಿಚಿತವಾಗಿರುವ 450ನೆಯ ವಚನದಲ್ಲಿ ತಿದ್ದಿದೆ. ಉಳಿದೆರಡು ವಚನಗಳು ಅಷ್ಟೊಂದು ಬಾಯಿಪಾಠವಾಗಿರಲಿಲ್ಲ. ಹೀಗಾಗಿ ತಟ್ಟನೆ ನೆನಪಿಗೆ ಬರದೆ ಹಾಗೆಯೇ ಉಳಿದಿದೆ.

ಮೊದಲು ಕೂಡಲ ಸಂಗಮದೇವ ಎಂದು ಡಿ.ಟಿ.ಪಿ. ಮಾಡಿಸಲಾಗಿತ್ತು. ಚಿಂತನೆ ಮಾಡುವಾಗ ಸರಿ ಎನ್ನಿಸದೆ ನಿರಾಕಾರ ದೇವರನ್ನು ನಿರ್ದೇಶಿಸುವ ಪದಕ್ಕೆ ಬಹಳ ಹುಡುಕಿದಾಗ "ಲಿಂಗದೇವ" ಸಿಕ್ಕಿದ. ಪೂರ್ತಿ ಓದಲು ಸಮಯ ಕಡಿಮೆ ಇತ್ತು. ಬಿಡುಗಡೆಗೊಂಡ ದಿನಾಂಕ ನಿಗಧಿಯಾಗಿ ಹಾಲ್ ಎಲ್ಲ ಬುಕ್ಕಾಗಿತ್ತು. ಕಂಪೋಸ್ ಮಾಡುವವರಿಗೆ ಹೇಳಿದೆ 'ಶಿವ' ವಾಚಕವಾಗಿದ್ದಲ್ಲೆಲ್ಲ ಕೂಡಲ ಸಂಗಮದೇವ ಇರಲಿ, ನಿರಾಕಾರ ದೇವರ ಕಲ್ಪನೆ ಬಂದಲ್ಲಿ 'ಲಿಂಗದೇವ' ಹಾಕಿರಿ." ಎಂದು ಹೀಗೆ ಅವರು ಹಾಕುವಾಗ ಕೆಲವು ಕಡೆ ಅದಲು ಬದಲಾಗಿವೆ. ನಂತರ ಪಟ್ಟಿ ಮಾಡಿ ತಿದ್ದುಪಡಿಯನ್ನು "ಲಿಂಗದೇವನ ಲೀಲಾ ವಿಶೇಷ"ದಲ್ಲಿ ಕೊಟ್ಟಿದ್ದೇನೆ ಮತ್ತು ಲಿಂಗದೇವ ಪದ ಎಷ್ಟು ವಚನಗಳಲ್ಲಿ ಧರ್ಮಪಿತರು ಬಳಸಿದ್ದಾರೆ. ಎಂಬ ಪಟ್ಟಿಯನ್ನು ಸಹ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯ ಸಂಖ್ಯೆ ಕೊಟ್ಟು ಮುದ್ರಿಸಲಾಗಿದೆ. ಹೀಗಾಗಿ ಕೆಲವು ಲೋಪ ಉಳಿದಿವೆ. ಮುಂದಿನ ಆವೃತ್ತಿಯಲ್ಲಿ ಸರಿಪಡಿಸಲಾಗುವುದು.

ಪ್ರ:3 ವ.1270ರಲ್ಲಿ ದೇವರು ಕಾಮನ ಕೊಂದಿಹನೆಂಬರು ಈ ವಚನದ ತಾತ್ಪರ್ಯವೇನು ?

★ ದೇವರು ಕಾಮನ ಕೊಂದಿಹನೆಂಬರು;
ದೇವರಿಗೆ ಇಬ್ಬರು ಹೆಂಡಿರುಂಟು
ಕಾಮವೈರಿಗಳು, ಕಾಮನಕೊಂದ ಮೂವರು ಇತ್ತಲೈದ್ದಾರೆ.
ಲಿಂಗದೇವನಲ್ಲಿ ಶುಕನು, ಹನುಮಂತ,
ಸೊನ್ನಲಿಗೆ ಸಿದ್ಧರಾಮಯ್ಯನು.

ಶಿವನು ದೇವರು; ಅವನು ಕಾಮನ ದಹನ ಮಾಡಿ ಕೊಂದುಬಿಟ್ಟ ಎಂದು ಪುರಾಣಕಾರರು ಬರೆಯುತ್ತಾರೆ. ನಿಜವಾಗಲೂ ಕಾಮನನ್ನು ಕೊಂದಿದ್ದರೆ ಶಿವನು ಮದುವೆ ಏಕೆ ಆಗುತ್ತಿದ್ದ? ನಿಜವಾದ ವಿರಾಗಿಗಳು, ಬ್ರಹ್ಮಚಾರಿಗಳು ಮೂವರು; ಶುಕ ಮಹರ್ಷಿ, ಹನುಮಂತ ಮತ್ತು ಸಿದ್ಧರಾಮೇಶ್ವರ ಎಂದು ಹೇಳುತ್ತ ಬಸವಣ್ಣನವರು ಈ ಮೂವರು ಅಖಂಡ ವೈರಾಗ್ಯ ಮೂರ್ತಿಗಳು ಎಂದು ಕೊಂಡಾಡುತ್ತಾರೆ.

ಪ್ರ.4 ವಚನ 496ರಲ್ಲಿ ಬತ್ತೀಸ ರಾಗವ ಹಾಡಯ್ಯ ಎಂದಿದೆ. ಬತ್ತೀಸ್ ಹಿಂದಿ ಪದವಲ್ಲವೆ ?

★ ಜನಪದ ಸಾಹಿತ್ಯ ಬಿಟ್ಟರೆ ನಮ್ಮ ದೇಶದಲ್ಲಿ ಉತ್ತರಾದಿ, ದಕ್ಷಿಣಾದಿ ಎಂದು ಎರಡು ಶಾಸ್ತ್ರೀಯ ಸಂಗೀತದ ಪ್ರಾಕಾರಗಳಿವೆ. ಇಂದಿನ ಉತ್ತರ ಕರ್ನಾಟಕದಲ್ಲಿ ಉತ್ತರಾದಿ ಶಾಸ್ತ್ರೀಯ ಸಂಗೀತವೇ ಪ್ರಚಾರದಲ್ಲಿರುವಂತೆ ಅಂದು ಸಹ ಅದೇ ಶೈಲಿ ಇರಬಹುದು. ಮೂಲ ರಾಗಗಳು 32; ಸ್ವರ ಸಂಯೋಜನೆ ಬೇರೆ ಬೇರೆ ರೀತಿ ಆಗಿ ಉದಿಸುವ ರಾಗಗಳಿಗೆ ಬೇರೆ ಬೇರೆ ಹೆಸರು ಕೊಡಲಾಗಿದೆ. ಮೂಲ ರಾಗಗಳು ಬತ್ತೀಸ-32. ಹೀಗಾಗಿ ಆ ಪದವನ್ನು ಬಳಸಿದ್ದಾರೆ. ಈ ಪದ ಪ್ರಯೋಗದಿಂದ ಧರ್ಮಪಿತರಿಗೆ ಶಾಸ್ತ್ರೀಯ ಸಂಗೀತದ ಜ್ಞಾನವೂ ಇತ್ತೆಂದು ಊಹಿಸಬಹುದಾಗಿದೆ.

ವೀರಭದ್ರಪ್ಪ ನಿವೃತ್ತ ನೌಕರ, ಊರು ಹೆಸರು ಬೇಡ.

? ನಾವು ನಿಮ್ಮ ಅಭಿಮಾನಿಗಳೇ ಇದ್ದೆವು. ಲಿಂಗದೇವನ ಬಳಿಕ ದೂರವಾದೆವು. ನೀವು ಚರ್ಚಿಸಲು ಸಿದ್ಧವಿದ್ದರೆ ನಾನು ಸಭೆಯನ್ನು ಏರ್ಪಡಿಸಬಲ್ಲೆ. ಅಭಿಪ್ರಾಯ ತಿಳಿಸಿರಿ ?

★ ಕ್ರಾಂತಿಯೋಗಿ ಬಸವಣ್ಣದಲ್ಲಿ ಒಂದು ಪ್ರಸಂಗವಿದೆ. ಬಸವಣ್ಣನವರ ಗಡಿಪಾರು, ಶರಣರ ವಧೆ ಎಲ್ಲ ಮುಗಿದ ಮೇಲೆ ಕೇದಾರನಾಥ ಶಾಸ್ತ್ರಿ ಮತ್ತು ಬದರಿನಾಥ ಪಂಡಿತ ಉಭಯತರೂ ಬಂದು "ನಮ್ಮಿಂದ ತಪ್ಪಾಯಿತು; ಇಷ್ಟೆಲ್ಲ ಆದುದು ನಮ್ಮಿಂದಲೇ" ಎಂದು ಅಕ್ಕನಾಗಲಾಂಬಿಕೆ, ಚನ್ನಬಸವಣ್ಣನವರಲ್ಲಿ ಕ್ಷಮೆ ಕೇಳುತ್ತಾರೆ. ಇದರಿಂದ ಲಾಭವೇನು ? ಎಲ್ಲಾ ವಿರೋಧ, ಅನ್ಯಾಯ ಮಾಡಿ, ಕೋರ್ಟ್ ಕಛೇರಿ ಸುತ್ತಿಸಿ ನಂತರ ಸ್ವಾಮಿಗಳು ನಿಮ್ಮೊಡನೆ ಚರ್ಚಿಸಲು ಬಯಸುತ್ತಾರೆ ಎಂದು ಅವರ ಕೆಲವು ಭಕ್ತರು ಬಂದು ವಿನಂತಿಸಿದಾಗ ನಾನು ಕೇಳಿದೆ "ಈ ವಿವೇಕ ಜ್ಞಾನ ಎಲ್ಲಿ ಹೋಗಿತ್ತು ? ನಾವೂ ಅವರು ಪರಿಚಿತರೇ ಇದ್ದೆವು. ಇಷ್ಟೆಲ್ಲ ರಂಪ ಮಾಡಿ ಈಗೇನು ಚರ್ಚೆ ? ಮೊದಲೇ ಆಗಿದ್ದರೆ ನಾನು ಚರ್ಚಿಸಲು ವಿವರಿಸಲು ಸಿದ್ಧವಿದ್ದೆ" ಎಂದು ಅವರಿಗೆ ಉತ್ತರಿಸಿದೆ. "ಸೆಳವಿನ ಭಾಗವನ್ನು ದಾಟ ದಂಡೆ ಮುಟ್ಟಿರುವಾಗ" ಇನ್ನು ಚರ್ಚೆ ಏಕೆ ?

ಮಂಜುನಾಥ ಬಂಡಿ, ರಾ.ಬ.ದಳ, ಅಮೀನಗಡ.

? ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಪ್ರಸಾರಾಂಗವು ಶಾಸನ ಅಧ್ಯಯನ ಎಂಬ ಕೃತಿ (ಸಂಪುಟ 2 ಸಂಚಿಕೆ 1) ಯಲ್ಲಿ ಒಂದು ಲೇಖನವನ್ನು ಪ್ರಕಟಿಸಿದೆ. ಅದರ 53ನೆಯ ಪುಟದಲ್ಲಿ ವೀರಭದ್ರಯ್ಯ ಚನ್ನಬಸವಯ್ಯ ಹಿರೇಮಠ ಎಂಬುವವರು "ರೇನಾಡು ಚೋಳರಾಜರ ಶಾಸನಗಳು ಒಂದು ಚಿಂತನೆ" ಲೇಖನ ಬರೆದಿದ್ದಾರೆ. ಕಿ.ಶ.3ನೆಯ ಶತಮಾನದ ಶಾಸನಗಳು ರೇಣುಕರ ಪರಂಪರೆ ಸುಮಾರು 1700 ವರ್ಷಗಳಿಗಿಂತಲೂ ಪುರಾತನ; ವೀರಶೈವವು 12ನೆಯ ಶತಮಾನಕ್ಕೂ ಮೊದಲಿತ್ತು ಎಂದು ಶಾಸನ ದೃಢ ಪಡಿಸುತ್ತವೆ. ಎಂದು ಬರೆದಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ?

★ ಪಾಪ, ಹಿರೇಮಠ ವೀರಭದ್ರಯ್ಯನವರು ಕಷ್ಟಪಟ್ಟು, ಬೆಟ್ಟ ಅಗೆದು ಸತ್ತ ಇಲಿ ಹೊರತೆಗೆದಿದ್ದಾರೆ. ರಂಭಾಪುರಿ ಶ್ರೀಗಳು ಯುಗಮಾನೋತ್ಸವ ಆಚರಿಸುತ್ತಿರುವಾಗ, ಕೈಲಾಸವಾಸಿ ಕಾಶೀನಾಥ ಶಾಸ್ತ್ರಿಗಳು

ಮನುಷ್ಯರು ಬ್ರಹ್ಮನ ಸೃಷ್ಟಿ; ಮಾನವ ಜೀವ ಹುಟ್ಟುವ ಮೊದಲೇ ರೇಣುಕಾದಿ ಆಚಾರ್ಯರು ಪರಶಿವನ ಪಂಚಮುಖದಿಂದ ಉದ್ಭವಿಸಿದರು ಎಂದು ಕಥೆಗಳನ್ನು ಕಟ್ಟಿರುವಾಗ ವೀರಭದ್ರಯ್ಯನವರು 1700 ವರ್ಷಕ್ಕೂ ಮೊದಲು ಎಂದು ಮನುಷ್ಯರು ಲೆಕ್ಕ ಮಾಡುವಂತೆ ಲೆಕ್ಕ ಮಾಡುವುದು ಸರಿಯೆ ?

ವೀರಶೈವ ಬಸವ ಪೂರ್ವದ್ದು ಎಂದು ನಾವು ಜೀವಂತ ಇಲಿಯನ್ನೇ ಹಿಡಿದುಕೊಟ್ಟಿದ್ದೇವೆ. ಅದನ್ನೇಕೆ ವೀ.ಚ.ಹಿರೇಮಠ ಬಡಿದು, ಎತ್ತಿ ತೋರಿಸಬೇಕು.

ವಚನ ಸಾಹಿತ್ಯವು ಲಿಂಗಾಯತ ಧರ್ಮದ ಸಂವಿಧಾನ. ಅದು ಸ್ಪಷ್ಟವಾಗಿ ಹೇಳುತ್ತದೆ ಲಿಂಗಾಯತ ಧರ್ಮದ ಜನಕ ಬಸವಣ್ಣನವರು ಎಂದು. ಇನ್ನು ಯಾವ ಚರ್ಚೆಯೂ, ಶಾಸನವೂ ಅನುಯಾಯಿಗಳಿಗೆ ಅಗತ್ಯವಿಲ್ಲ.

? ಲೋಕಾಯುಕ್ತ ವೆಂಕಟಾಚಲಯ್ಯ ಅವರು ಭಾರಿ ಕುಳಗಳಾದ ಪೋಲೀಸ್ ಅಧಿಕಾರಿಗಳನ್ನು ಬಯಲಿಗೆ ಎಳೆದಿದ್ದಾರೆ. ಬಹುಶಃ ಸರ್ಕಾರ ಆ ಅಧಿಕಾರಿಗಳ ಮೇಲೆ ತೀಕ್ಷ್ಣ ಕ್ರಮ ಕೈಗೊಳ್ಳಬಹುದಲ್ಲವೆ ? ಆದರಲ್ಲೂ ಒಬ್ಬ ಪೋಲೀಸ್ ಅಧಿಕಾರಿ ಮೂರು ಸಲ ಮುಖ್ಯ ಮಂತ್ರಿಗಳ ಪದಕವನ್ನು ಪಡೆದಿದ್ದಾರೆಂಬುದು ಬಹಳ ವಿಶೇಷ. ಇದು ಎಂಥಾ ನಾಚಿಕೆಗೇಡಿನ ಸಂಗತಿಯಲ್ಲವೆ ?

★ ವೆಂಕಟಾಚಲಯ್ಯನವರೇನೋ ಹುಡುಕಿ ಕೊಡುತ್ತಾರೆ. ಆದರೆ ಸರ್ಕಾರಿ ವ್ಯವಸ್ಥೆ ಅವರಿಗೆ ಶಿಕ್ಷೆ ನೀಡುವ ಬದಲು ಭಕ್ಷೀಸು ಕೊಟ್ಟರೂ ಕೊಡಬಹುದು. "ವೆಂಕಟಾಚಲಯ್ಯನವರೇ ಧನ್ಯವಾದ; ಎಷ್ಟು ಜಾಣ್ಮೆಯಿಂದ ಅಧಿಕಾರದ ಸದುಪಯೋಗ(?) ಮಾಡಿಕೊಂಡು ಇಷ್ಟೊಂದು ಗಳಿಸಿರುವ ಪ್ರತಿಭೆ ಇರುವ ಈ ಪ್ರತಿಭಾವಂತರಿಗೆ ಬಡ್ತಿ ಕೊಟ್ಟರೆ ಸರ್ಕಾರ ಮತ್ತು ಪಕ್ಷಗಳಿಗೂ ಒಳ್ಳೆಯ ಪಾಲನ್ನು ಕೊಡಬಲ್ಲರು. ಇಂಥವರನ್ನು ಹುಡುಕಿಕೊಟ್ಟ ನಿಮಗೆ ನಾವು ಋಣಿಗಳು, ಎಂದು ನ್ಯಾ.ಮೂ.ವೆಂಕಟಾಚಲಯ್ಯ ಅವರಿಗೆ ಥ್ಯಾಂಕ್ಸ್ ಹೇಳಿ ಪ್ರತಿಭಾವಂತರಿಗೆ ಡಬ್ಬಲ್ ಪ್ರೊಮೋಷನ್ ಕೊಟ್ಟರೂ ಕೊಡಬಹುದು. ಹಾಗೆ ಪ್ರಶಸ್ತಿಗಳನ್ನು ನಮ್ಮ ದೇಶದ ವ್ಯವಸ್ಥೆಯಲ್ಲಿ ಪಡೆದುಕೊಳ್ಳಲಾರದವರು ದಡ್ಡರೇ ಸರಿ !

ವೃಷಭೇಂದ್ರಪ್ಪ, ತಿಮ್ಮಪ್ಪಯ್ಯನ ಹಳ್ಳಿ, ಚಳ್ಳಕೆರೆ ತಾಲ್ಲೋಕು

ಪ್ರ.1 ? ಗುರು ಬಸವಣ್ಣನವರು ಇಷ್ಟಲಿಂಗದ ಮೂಲಕ ಸಮಾನತೆ ತಂದಂತೆ ಶಿವನು ಸ್ಥಾವರಲಿಂಗದ ಮೂಲಕ ಸಮಾನತೆ ತಂದನು. ಆದ್ದರಿಂದ ಶಿವನನ್ನೂ ಬಳಸಿಕೊಂಡು ನಾವು ಬಸವ ಧರ್ಮವನ್ನು ಬೆಳೆಸಬಾರದೇಕೆ ?

★ ನಾನು ಬಹಳಷ್ಟು ಕಡೆ ಬರೆದಿದ್ದೇನೆ. ಶಿವನು ಭಾರತೀಯ ಪರಂಪರೆಯ ಮೂಲಿಗ, ಸಮತಾವಾದಿ, ವೈದ್ಯರಾಜ, ನಾದಯೋಗಿ, ನೃತ್ಯಾಚಾರ್ಯ ಇತ್ಯಾದಿ. ಶಿವನು ಬೋಧಿಸಿದ ಶೈವ ಧರ್ಮವು ಬಹಳ ಉತ್ಕೃಷ್ಟವಾಗಿತ್ತು. ಆದರೆ ನಂತರ ಅದು ವೈದಿಕ ಧರ್ಮದ ಪ್ರಭಾವದಿಂದಾಗಿ ಪೂರ್ತಿ ವಿಕೃತಗೊಂಡಿತು. ರುದ್ರಾಭಿಷೇಕ, ಯಜ್ಞ-ಯಾಗ, ಅಗ್ನಿ ಪೂಜೆ, ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆ ಪುರೋಹಿತ ಶಾಹಿ ಎಲ್ಲ ಅಳವಡಿಸಿಕೊಂಡು ಶಿವನ ಮೂಲ ತತ್ತ್ವಕ್ಕೆ ವಿರುದ್ಧವಾಗಿದೆ. ರುದ್ರಾಭಿಷೇಕ, ಯಜ್ಞ-ಯಾಗ, ಅಗ್ನಿ ಪೂಜೆ, ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆ ಪುರೋಹಿತ ಶಾಹಿ ಎಲ್ಲ ಅಳವಡಿಸಿಕೊಂಡು ಶಿವನ ಮೂಲ ತತ್ತ್ವಕ್ಕೆ ಮಾತ್ರವಲ್ಲ ಶಿವನ ಸಿದ್ಧಾಂತಕ್ಕೂ ಹೋಲಿಕೆಯಾಗದು. ಹೀಗಾಗಿ ಶೈವದ ಅನುಕರಣೆ ನಮಗೆ ಸಹ್ಯವಾಗದು. ಆದರೆ ಶಿವನು ಮಾತ್ರ ಆದರ್ಶ ಯೋಗಿಯಾದುದರಿಂದ ಆತನನ್ನು ಗುರುವೆಂದು, ಯೋಗಿ ಎಂದು ಖಂಡಿತಾ ಬಸವ ತತ್ತ್ವಾನುಯಾಯಿಗಳು ಗೌರವಿಸಬಹುದು. ಬಸವ ತತ್ತ್ವವು ಯಾವುದೇ ವ್ಯಕ್ತಿಯನ್ನು ದೇವರು ಎಂದು ಒಪ್ಪುವುದಿಲ್ಲ. ಆದ್ದರಿಂದ ಶಿವನು ದೇವರು ಅಲ್ಲ; ಮಹಾಪುರುಷ ಎನ್ನಲು ಯಾವ ಅಡ್ಡಿಯೂ ಇಲ್ಲ.

ಪ್ರ.2 ? ಮಗನು ಅಧಿಕಾರದ ಆಸೆಯಿಂದ ತಂದೆಯ ತಲೆಯನ್ನು ಕತ್ತರಿಸಿದಾಗ ಸಿದ್ಧಲಿಂಗೇಶ್ವರರು ರುಂಡ ಮುಂಡ ಸೇರಿಸಿ ಜೀವ ಕೊಟ್ಟರು. ಅವರಿಗಿಂತಲೂ ಮಹಿಮಾ ಪುರುಷರಾದ ಬಸವಣ್ಣನವರು ಶರಣರ ವಧೆಯಾದಾಗ ಪುನಃ ಜೀವ ಕೊಡಲಿಲ್ಲವೇಕೆ?

★ ವ್ಯಕ್ತಿಗಳು ಲಿಂಗೈಕ್ಯರಾದ ನಂತರ ಅವರ ಬಗ್ಗೆ ಭಕ್ತಿ ಹುಟ್ಟಿಸಲು ವಿಲಕ್ಷಣ ಪವಾಡಗಳನ್ನು

ಹೆಣೆಯುವುದುಂಟು. ಅಂಥ ಪವಾಡಗಳಿಂದಲೇ ವ್ಯಕ್ತಿಗಳ ಹಿರಿಮೆ ಅಳೆಯುವ ಅವೈಜ್ಞಾನಿಕ ನಂಬಿಕೆ ನಮ್ಮ ದೇಶದಲ್ಲಿ ಮಾತ್ರ ಇದೆ. ಮೊಹಮ್ಮದ್ ಪೈಗಂಬರ್ ಕುರಿತು, ಏಸು ಕುರಿತು ಆ ರೀತಿ ಅವರ ಅನುಯಾಯಿಗಳು ಅಳೆಯದೆ ಅವರು ಕೊಟ್ಟ ತತ್ವಗಳ ಮೇಲೆ, ಅವರ ತ್ಯಾಗದ ಮೇಲೆ ಗೌರವಿಸುತಾರೆ. ಬುದ್ಧನ ಬಗ್ಗೆ ಅವೈಜ್ಞಾನಿಕ ಕಥೆಗಳು ಬೆಳೆದು ಬಂದಿಲ್ಲದ್ದು ವಿಶೇಷ. ನಮ್ಮ ದೇಶದಲ್ಲಿ ಪುರಾಣಕಾರರು ಏನು ಬೇಕಾದರೂ ಕಥೆಗಳನ್ನು ಬರೆದು ಬಿಡುತ್ತಾರೆ; ಜನರು ನಂಬುತ್ತಾರೆ. ಈ ಮೂಢ ನಂಬಿಕೆಗೆ ಚಲನಚಿತ್ರ ಜಗತ್ತು ಇನ್ನಷ್ಟು ಜೀವ ತುಂಬುತ್ತದೆ.

ಇದನ್ನು ಅರಿತೇ ಕೆಲವು ಕವಿಗಳು ಉದಾ: ಸಿಂಗಿರಾಜ ಮತ್ತು ಚೋರ ಬಸವ ಪುರಾಣದ ಕರ್ತೃ ಬಸವಣ್ಣನವರು ಸತ್ತವರಿಗೆ ಜೀವ ಕೊಟ್ಟ ಪವಾಡಗಳನ್ನು ಬರೆದಿದ್ದಾರೆ. ನಾನು ಅವನ್ನು ನಂಬುವುದಿಲ್ಲ; ಬಸವಣ್ಣನವರು ಸಹ ಸತ್ತವರನ್ನು ಬದುಕಿಸಿದ ಉಲ್ಲೇಖ ಕಾವ್ಯಗಳಲ್ಲಿ ಮಾತ್ರವಲ್ಲ ವಚನಗಳಲ್ಲೂ ಬರುತ್ತವೆ. ಅವನ್ನು ನಾವು ಹೀಗೆ ಅರ್ಥ ಮಾಡಬೇಕು. ಕೆಲವು ಸನ್ನಿವೇಶದಲ್ಲಿ ಹಾವು ಕಡಿದು ಎಚ್ಚರ ತಪ್ಪಿರಬಹುದು; ಕೋಮಾ ಅವಸ್ಥೆ ಬಂದಿರಬಹುದು, ಮೂರ್ಛೆ ಹೋಗಿರಬಹುದು. ಬಸವಣ್ಣನವರಂಥ ಮೇಧಾವಿಗಳು ಎಲ್ಲ ವಿಷಯದಲ್ಲೂ ಜ್ಞಾನ ಉಳ್ಳವರಾಗಿರುತ್ತಾರೆ. ಅವರು ಕೆಲವು ಚಿಕಿತ್ಸೆ ಮಾಡಿ ಪ್ರಜ್ಞೆ ಮರಳಿಸಿರಬಹುದು ಒಮ್ಮೆ ಮೇದಾರ ಕೇತಯ್ಯ ಬಿದಿರು ಕಡಿಯಲು ಹೋಗಿ ಬಿದ್ದು ಮೂರ್ಛೆ ಹೋಗಿರುತ್ತಾರೆ. ಅವರು ಲಿಂಗೈಕ್ಯರಾದರೆಂದೇ ಎಲ್ಲರೂ ಪ್ರಲಾಪಿಸುವಾಗ ಬಂದ ಬಸವಣ್ಣನವರು ಜೀವ ಕೊಡುತ್ತಾರೆ ಎಂದು ವಿವರಣೆಯಿದೆ. ಅಧ್ಯಯನ ಶೀಲರಾಗಿದ್ದ ಧರ್ಮಪಿತರು ಕೆಲವು ಚಿಕಿತ್ಸಾ ಕ್ರಮಗಳನ್ನು ತಿಳಿದಿರಬಹುದು. ವಿದ್ಯಾರ್ಥಿ ಇದ್ದಾಗಲೇ ಕಾಲು ಜಾರಿ ಕೊಳದಲ್ಲಿ ಬಿದ್ದಿದ್ದ ಮಿತ್ರನನ್ನು ಈಜಿ ತಂದು ಬದುಕಿಸಿದ್ದು (ಸಾಹಸಮಯ) ಪವಾಡವಲ್ಲವೆ ?

ಪ್ರಶ್ನೆ.3 ? ಕಲ್ಯಾಣ ಕ್ರಾಂತಿಯ ನಂತರ ಶರಣರು ಚದುರಿದರು. ಅವರುಗಳು ನೆಲೆಸಿದ ಜಾಗಗಳೆಲ್ಲ ಪ್ರಸಿದ್ಧ ಕ್ಷೇತ್ರಗಳಾಗಿ, ಅವರ ಹೆಸರುಗಳು ಪ್ರಸಿದ್ಧವಾದವು. ಆ ರೀತಿ ಬಸವಣ್ಣನವರ ಹೆಸರಿನ ಕ್ಷೇತ್ರವು ಏಕೆ ಬೆಳೆಯಲಿಲ್ಲ ? ಮತ್ತು ಆ ಶರಣರು ತಮಗೆ ಪೂಜ್ಯರಾಗಿದ್ದ ಬಸವಣ್ಣನವರ ಪ್ರಚಾರ ಏಕೆ ಮಾಡಲಿಲ್ಲ? ಕಲ್ಯಾಣದಲ್ಲಿ ಜಾತಿವಾದಿಗಳ ಹೆದರಿಕೆಯಿಂದ ಪ್ರಚಾರ ಮಾಡಿರಲಿಕ್ಕಿಲ್ಲ. ದೂರದೂರದಲ್ಲಿ ಇದ್ದ ಶರಣರು ಮಾಡಬಹುದಿತ್ತಲ್ಲ. ಆದರಿಂದಲೂ ಬಸವಣ್ಣನವರ ಹೆಸರು ಅಳಿಯಲು ಕಾರಣವಾಯಿತೇನೋ? ಉದಾ : ಸೂಗೂರು ಚನ್ನವೀರ ಸ್ವಾಮಿ, ಎಡೆಯೂರು ಸಿದ್ದಲಿಂಗೇಶ್ವರ, ಉಳವಿ ಚನ್ನಬಸವಣ್ಣ, ಸೊಲ್ಲಾಪುರ ಸಿದ್ಧರಾಮೇಶ್ವರ ಮುಂತಾದವರ ಕ್ಷೇತ್ರಗಳಲ್ಲಿ ಬಸವಣ್ಣನವರ ಬಗ್ಗೆ ಭಕ್ತಿ ಇಲ್ಲವಾಯಿತು. ಈ ರೀತಿ ಆ ಶರಣರು ತಮ್ಮ ಪ್ರಚಾರ ಮಾತ್ರ ಮಾಡಿಕೊಂಡುದು ಗುರುದ್ರೋಹ, ಧರ್ಮ ದ್ರೋಹವಲ್ಲವೆ ?

★ ಇಂಥ ವಿಲಕ್ಷಣ ಪ್ರಶ್ನೆಗಳನ್ನು ಈವರೆಗೂ ಯಾರೂ ಕೇಳಿರಲಿಲ್ಲ. ಇಂಥ ಸಂದೇಹ ನಿಮ್ಮಂತೆ ಬಹಳ ಜನರಲ್ಲಿ ಇರಬಹುದಾದ್ದರಿಂದ ವಿವರವಾಗಿ ಉತ್ತರಿಸುತ್ತೇನೆ.

ನೀವು ಸೂಚಿಸಿದ ಶರಣ ಪರಂಪರೆಯ ಕೆಲವು ಮಹಾನುಭಾವರೇ ಅಲ್ಲದೆ ಮತ್ತೆ ಕೆಲವರುಂಟು ಮಲೆ ಮಾದೇಶ್ವರ, ಗುರು ಮಲ್ಲೇಶ್ವರ, ಘನ ಲಿಂಗದೇವರು-ಇವರು ಮೈಸೂರು. ಚಾಮರಾಜ ನಗರ ಜಿಲ್ಲೆಯವರು, ಷಣ್ಮುಖ ಸ್ವಾಮಿ-ಗುಲಬರ್ಗಾ, ಅಥಣಿ ಶಿವಯೋಗಿ-ಬೆಳಗಾಂ, ಘನ ಮಠದಾರ್ಯರು-ಸಂತೆ ಕೆಲೂರು, ವಿಜಯ ಮಹಾಂತೇಶ್ವರ - ಚಿತ್ತರಗಿ ಮುಳುಗುಂದದ ಬಾಲಲೀಲಾ ಮಹಾಂತ ಶಿವಯೋಗಿ, ಗುಡ್ಡಾಪುರ ದಾನಮ್ಮ; ಮನ್ಮಥ ಸ್ವಾಮಿ-ಮಹಾರಾಷ್ಟ್ರದ ಕಪಿಲಧಾರಾ ಇವರೆಲ್ಲರ ಕ್ಷೇತ್ರಗಳು ಬೆಳೆದಿವೆ; ನಿಜ. ಆ ರೀತಿಯಲ್ಲಿ ಬಸವಣ್ಣನವರ ಹೆಸರಲ್ಲಿ (ಮೂಢ ಭಕ್ತಿಯ) ಕ್ಷೇತ್ರ ಬೆಳೆದಿಲ್ಲ. ಆದರೆ ಇವರೆಲ್ಲರೂ ಆಯಾ ಪ್ರಾಂತ್ಯಗಳಲ್ಲಿ ಪ್ರಸಿದ್ಧರಾಗಿದ್ದಾರೆ. ಆದರೆ ಬಸವಣ್ಣನವರು ಅಕಾಯ ಚರಿತ್ರರಾಗಿ ಎಲ್ಲರ ಹೃದಯದಲ್ಲಿ ನೆಲೆ ನಿಂತಿದ್ದಾರೆ. ಎಲ್ಲ ರಾಜ್ಯಗಳಲ್ಲೂ ಬಸವ ಭಕ್ತಿ ಗುಪ್ತಗಾಮಿನಿಯಾಗಿ ಹರಿಯುತ್ತಿದೆ. ಈಗಿನ ಮಠಾಧೀಶರು ಮುಖ್ಯವಾಗಿ ಪಂಚಪೀಠಾಧೀಶರು, ಕೆಲವು ವಿರಕ್ತ ಮತ್ತೆ ಕೆಲವು ಆರೂಢ ಮಾರ್ಗಿಗಳು ಸತತವಾಗಿ ಲಿಂಗಾಯತರ ಮನ, ಬುದ್ಧಿಗಳ ಮೇಲೆ ಧಾಳಿ

ಮಾಡುತ್ತಲೇ ಇದ್ದರೂ ಅವರ ಹೃದಯದಲ್ಲಿ ಬಸವ ಭಕ್ತಿ ಕರಿಕೆಯ ಬೇರಿನಂತೆ ಹುದುಗಿಕೊಂಡಿದೆ. ಅದು ಅಳಿದಿಲ್ಲ, ಮರೆ ಮಾಡಲ್ಪಟ್ಟಿದೆ. ಇದಕ್ಕೆ ಕಾರಣ ಆ ಕ್ಷೇತ್ರಗಳ ಅಧಿನಾಯಕರಾದ ಶರಣರಲ್ಲ. ದಯವಿಟ್ಟು ಅವರಿಗೆ ಗುರು ದ್ರೋಹ, ಧರ್ಮ ದ್ರೋಹದ ಆಪಾದನೆ ಹೊರಿಸುವ ಪಾಪ ಮಾಡಬೇಡಿರಿ. ಆ ಮೂಲ ಶರಣರು ಬರೆದ ಸಾಹಿತ್ಯ ಓದಿರಿ. ಈಗಿನ ಸುತ್ತೂರು ಜಗದ್ಗುರುಗಳು ಬಸವಣ್ಣನವರನ್ನು ಧರ್ಮಗುರು ಎಂದು ಗೌರವಿಸದಿದ್ದ ಮಾತ್ರಕ್ಕೆ ಘನಲಿಂಗದೇವರನ್ನು ನಾವು ಹಳಿಯಲಾದೀತೆ ? ನಂತರದ ಅಥಣಿ ಮಠದ ಅಯ್ಯನೋರು ಗೌರವಿಸದ್ದಿರೆ ಅಪ್ಪನವರು ಎಂದು ಧರ್ಮಪಿತರನ್ನು ಗೌರವಿಸುತ್ತಿದ್ದ ಅಥಣಿ ಮುರುಘೇಂದ್ರ ಶಿವಯೋಗಿಗಳನ್ನು ಜರಿಯಲಾದೀತೆ? ಎಡೆಯೂರು ಸಿದ್ದಲಿಂಗೇಶ್ವರ ಕ್ಷೇತ್ರದಲ್ಲಿ ವೈದಿಕ / ಶೈವ ಪುರೋಹಿತ ಶಾಹಿ ಬಸವಣ್ಣನವರನ್ನು ಗೌರವಿಸದಿದ್ದ ಮಾತ್ರಕ್ಕೆ ಎಡೆಯೂರು ಸಿದ್ದಲಿಂಗೇಶ್ವರ ಬಸವ ನಿಷ್ಠೆಯನ್ನು ನಾವು ಮರೆಯಲಾದಿದೀತೆ ? ಮಹಾ ರಾಷ್ಟ್ರದ ಮನ್ಮಥ ಸ್ವಾಮಿ "ಬಸವಣ್ಣನ ತೊಟ್ಟಿಲ ಕಂದ ನಾನು" ಎಂದು ಹಾಡಿಕೊಂಡಿದ್ದಾರೆ. ಚನ್ನಬಸವಣ್ಣನವರ ಪ್ರಾಣವೇ ಆಗಿದ್ದ ಧರ್ಮದ ಆತ್ಮವೇ ಆಗಿದ್ದ ಬಸವಣ್ಣನವರನ್ನು ಚನ್ನಬಸವಣ್ಣ, ಸಿದ್ಧರಾಮೇಶ್ವರರು "ಹುಚ್ಚು ಪ್ರೀತಿ" ಯಿಂದ ಕೊಂಡಾಡಿದ್ದಾರೆ. ಆದರೆ ಅವರ ಕ್ಷೇತ್ರಗಳಲ್ಲಿರುವ ಪೂಜಾರಿಗಳು, ದೇವಸ್ಥಾನ ಸಮಿತಿಯವರು ಬಸವಣ್ಣನವರ ಹೆಸರು ಹೇಳಲು ಫೋಟೋ ಹಾಕಲು ಉಬ್ಬಸ ಪಡುತ್ತಾರೆ. ಈ ಪುರೋಹಿತ ಶಾಹಿಯ ದಾಳಿ 20ನೆಯ ಶತಮಾನದ ಪೂರ್ವಾರ್ಧದಲ್ಲಿ ಜಂಗಮವು ಜಾತಿಯಾಗಿ ವಿಕೃತಗೊಂಡುದ್ದರ ಪರಿಣಾಮವಾಗಿ ಉಂಟಾದುದು. ಅದಕ್ಕಾಗಿಯೇ ಈ ಕ್ಷೇತ್ರಗಳ ಗುಡಿಗುಂಡಾರಗಳಲ್ಲಿ ಪೂಜಾರಿವರ್ಗ ವಚನ ಸಾಹಿತ್ಯ ಕಂಡರೆ ಹಾವು ತುಳಿದವರಂತೆ ಬೆಚ್ಚುತ್ತಾರೆ.

ನಾವು ಹೆಚ್ಚು ಶ್ರಮ ಪಡಬೇಕಾಗಿಲ್ಲ; ಮನೆ ಮನೆಗೆ ವಚನ ಸಾಹಿತ್ಯ ಮುಟ್ಟಿಸಿರಿ, ಓದಿಸಿರಿ. ಜನರು ಖಂಡಿತಾ ಜಾಗೃತರಾಗುತ್ತಾರೆ. ಪಂಚಪೀಠಾಧೀಶರು, ಚಿದಾನಂದ (ಚೀರಾಡೋ) ಮೂರ್ತಿ ಚೀರಾಡುತ್ತಲೇ ಇರಲಿ. ಬಸವ ಭಾಸ್ಕರನ ಮುಂದೆ ಜಾತಿವಾದಿ ಗೂಬೆಗಳ ಮುಲುಗಾಟ ಹೆಚ್ಚು ಕಾಲ ಉಳಿಯುವುದಿಲ್ಲ.

⌂ ಎಳನಡು ಸೋಮಶೇಖರಪ್ಪ, ತೋಟದ ಮನೆ

? ಪುರಾಣ ದೇವತೆಗಳ ಪರಾಮರ್ಶೆ ಮತ್ತು ದೇವರು ಎಂಬ ಒಂದು ಪುಸ್ತಕವನ್ನು ನಂಜುಂಡಪ್ಪ ಎನ್ನುವವರೊಬ್ಬರು ಬರೆದಿದ್ದು ಪೂಜ್ಯ ಲಿಂಗಾನಂದ ಸ್ವಾಮಿಗಳು ಸತ್ತ ನಂತರ ಅವರ ಹೆಸರನ್ನು ಚಿರಸ್ಥಾಯಿಯಾಗಿ ಮಾಡಲು ತಾವು ಲಿಂಗದೇವ ಎಂದು ವಚನಾಂಕಿತ ಬಳಸಿದುದಾಗಿ ಬರೆದಿದ್ದಾರೆ. ವ್ಯಂಗ್ಯವಾದ, ಕುಹಕವಾದ ಭಾಷೆಯಲ್ಲಿ ತಮ್ಮನ್ನು ಮತ್ತು ಪೂಜ್ಯ ಲಿಂಗಾನಂದ ಸ್ವಾಮಿಗಳನ್ನು ನಿಂದಿಸಿದ್ದಾರೆ. ಇದರಿಂದ ನಮಗೆಲ್ಲ ಮನಸ್ಸಿಗೆ ನೋವಾಗಿದೆ. ಮತ್ತು ಕೋಪವೂ ಬಂದಿದೆ. ಈ ಬಗ್ಗೆ ತಮ್ಮ ಸಲಹೆ ಏನು ?

★ ಈ ಪದದ ಸಂಶೋಧನೆಯನ್ನು ಪೂಜ್ಯ ಗುರುಗಳು ಇದ್ದಾಗಲೇ ನಾನು ಮಾಡಿ, ಬಸವ ಧರ್ಮ ಸಂಸ್ಕಾರಗಳು ಎಂಬ ಪುಸ್ತಕದ ಮೊದಲ ಪುಟದಲ್ಲಿಯೇ ಪ್ರಕಟಿಸಿದ್ದೇನೆ. 14-1-1995ರಂದು ಶರಣ ಮೇಳದಲ್ಲಿ ಈ ಪುಸ್ತಕ ಬಿಡುಗಡೆ ಆಯಿತು. ಪೂಜ್ಯರು ಲಿಂಗೈಕ್ಯರಾದುದು 30-6-1995ರಂದು. ಕೂಡಲ ಸಂಗಮ ದೇವ ಎಂಬ ವಚನ ಮುದ್ರಿಕೆ ಗುರು ಬಸವಣ್ಣನವರ ಸಾಕ್ಷಾತ್ಕಾರದ ನಂತರದ ವಚನಗಳಿಗೆ ಅನ್ವಯವಾಗುವುದಿಲ್ಲ ಎಂಬ ಚಿಂತೆ ಬಹಳ ವರ್ಷಗಳಿಂದ ಕಾಡುತ್ತಿತ್ತು. ಸೂಕ್ತ ತಾತ್ತ್ವಿಕ ಪದಕ್ಕಾಗಿ ಹುಡುಕುತ್ತಿದ್ದೆ. ಅಂಥ ಸನ್ನಿವೇಶದಲ್ಲೇ ಶ್ರೀ ಗುರು ಬಸವಣ್ಣನವರು ಕನಸಿನಲ್ಲಿ ಪ್ರೇರಣೆ ನೀಡಿದರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ ಬಸವಣ್ಣನವರ ವಚನ ಕೃತಿಯಲ್ಲಿ ಪಾಠಾಂತರಗಳಿವೆ. ಅವುಗಳಲ್ಲಿ ಹುಡುಕಿದಾಗ ಮತ್ತು ವಚನದ ಪಠ್ಯದಲ್ಲಿ ಸಹ ಲಿಂಗದೇವ ಪದ ಸಿಕ್ಕಿತು. ಬಹಳ ಹರ್ಷವಾಯಿತು. ಆಂತರಿಕವಾಗಿ ಸಮಾಲೋಚಿಸಲು ಬೀದರಿನ ಓರ್ವ ವ್ಯಕ್ತಿಗೆ ಬರಲು ತಿಳಿಸಿ, ಚರ್ಚಿಸಿದೆ. "ಇದು ಸೂಕ್ತ; ಆದರೆ ಬಲು ದೊಡ್ಡ ಸಾಹಸ" ಎಂದರು. ಪೂಜ್ಯ

ಗುರುಗಳು ಪ್ರವಚನದಲ್ಲಿ ಬೇರೊಂದು ಊರಲ್ಲಿ ನಿರತರಾಗಿದ್ದರು. ಆ ಪ್ರವಚನದ ನಂತರ 'ಇನ್ನೊಂದು ಊರಲ್ಲಿ ಪ್ರವಚನ ಶುರು ಮಾಡುವ ಮೊದಲು ಬಂದು ಹೋಗಬೇಕು. ಮಹತ್ವಪೂರ್ಣ ವಿಷಯ ಚರ್ಚಿಸಬೇಕಾಗಿದೆ.' ಎಂದಾಗ ಗುರುಗಳು ಆಗಮಿಸಿದರು. "ಲಿಂಗದೇವ" ವಚನಾಂಕಿತದ ಬಗ್ಗೆ ಪ್ರಸ್ತಾಪಿಸಿದಾಗ ದಿಗ್ಭ್ರಾಂತರಾದರು, ಸಂತೋಷಪಟ್ಟರು. "ಇದು ಬಹು ದೊಡ್ಡ ಸಾಹಸ; ನಿಮ್ಮ ಆತ್ಮಬಲ, ನೀವೇ ನಿರ್ಧರಿಸಿ".ಎಂದರು "ಇದರಲ್ಲಿ ಗುರು ಬಸವ ತಂದೆಯ ಪ್ರೇರಣೆ-ಸಂಕಲ್ಪವಿದೆ" ಎಂದೆ. ಗುರುಗಳು ಒಪ್ಪಿಗೆ ನೀಡಿದರು. ಪೂಜ್ಯ ಗುರುಗಳು ಇದ್ದಾಗಲೇ ಪ್ರಕಟಿಸಲಾಗಿತ್ತು.

ನಂಜುಂಡಪ್ಪನವರ ಬರಹ ಓದಿ ನೀವು ಅಷ್ಟೊಂದು ಉದ್ವಿಗ್ನರಾಗಬೇಡಿ. ಮತ್ಸರವೂ ಮೆಚ್ಚುಗೆಯ ಇನ್ನೊಂದು ಮುಖ. ಲಿಂಗಾಯತ ಸಮಾಜದ ಸಾಹಿತಿಗಳಲ್ಲಿ, ಮಠಾಧೀಶರಲ್ಲಿ ಪರಸ್ಪರ ಮೆಚ್ಚಿಕೊಳ್ಳುವ, ಪ್ರತಿಭೆ ಗುರುತಿಸುವ ಬೌದ್ಧಿಕ ಪ್ರಾಮಾಣಿಕತೆ, ಸದ್‌ಭಾವ ಇಲ್ಲವೇ ಇಲ್ಲ. ಅಂಥ ಮತ್ಸರ, ದ್ವೇಷ ಅಂತರಂಗದಲ್ಲಿದ್ದರೂ ನಂಜುಂಡಪ್ಪನವರು ಪೂಜ್ಯ ಗುರುಗಳು, ನಾವು ನಾಡಿನಾದ್ಯಂತ ಧರ್ಮ ಪ್ರಚಾರ ಮಾಡಿದುದನ್ನು ಕುಹಕ-ವ್ಯಂಗ್ಯ ಭಾಷೆಯಲ್ಲಿ ವಿವರಿಸಿದ್ದಾರೆ. ನಮ್ಮ ಕಾರ್ಯವನ್ನು ಮೆಚ್ಚಿ ಜನರು ಹೇರಳವಾಗಿ ಕಾಣಿಕೆ ಕೊಡುತ್ತಿದ್ದಾರೆ. ಎಂದು ಹೇಳಿದ್ದಾರೆ. ಲಿಂಗದೇವ ಬದಲು ಲಿಂಗಾನಂದದೇವ ಎಂದು ಇಡಬೇಕಿತ್ತು ಎಂದು ಸೂಚಿಸಿದ್ದಾರೆ. ಪೂಜ್ಯ ಗುರುಗಳ ಬಗ್ಗೆ ಹತ್ತಾರು ಗೀತೆಗಳನ್ನು ಬರೆದು ನಾನು ನೇರವಾಗಿ ಕೊಂಡಾಡಿದ್ದೇನೆ. ಜ್ಞಾನ-ಅನುಗ್ರಹ ನೀಡಿದ ಗುರುಗಳನ್ನು ಹೊಗಳಲು ಸಂಕೋಚವೇಕೆ? ಗುರು ಬಸವಣ್ಣನವರ ವಚನಾಂಕಿತ ಸೃಷ್ಟಿಕರ್ತನು ಮತ್ತು ನಮ್ಮ ಅಂಗದ ಮೇಲೆ ಕುಳಿತು ಪೂಜೆಗೊಳ್ಳುವ ಕುರುಹೂ ಆದ ಇಷ್ಟಲಿಂಗ ದೇವನನ್ನು ಕುರಿತು ಇರಬೇಕಾಗಿದೆ. ಮುಂದೆ ನಾನು ವಚನ ಬರೆದು ಅವುಗಳ ವಚನಾಂಕಿತವಾಗಿ ಲಿಂಗಾನಂದ ದೇವ ಎಂದೂ ವಚನಾಂಕಿತವನ್ನು ಇಟ್ಟು ಕೊಳ್ಳಬಹುದೇನೊ! ನಂಜುಂಡಪ್ಪನ ಬರಹದಲ್ಲಿ ಲಿಂಗದೇವ ಮತ್ತು ಲಿಂಗಾನಂದ ದೇವದ ವ್ಯತ್ಯಾಸ ವಿವರಿಸಲಾಗಿದೆ. ಆದ್ದರಿಂದ ನಂಜುಂಡಪ್ಪನವರಂತೆ ಮತಿಗೆಟ್ಟು ನೀವು ಆರ್ಭಟಿಸದೆ ಅವರ ಕುಹಕ ಬರಹವನ್ನು ಸರಿಯಾಗಿ ಓದಿರಿ ಮತ್ತು ಕುಹಕ ಭಾಷೆಯಲ್ಲಿ ಇರುವ ಮೆಚ್ಚುಗೆಯನ್ನು ಗ್ರಹಿಸಿರಿ. ಒಮ್ಮೆ ಓರ್ವ ಮಹಾತ್ಮರ ಮೆರವಣಿಗೆಯನ್ನು ಭಕ್ತರು ನಡೆಸಿದ್ದರಂತೆ. ಆಗ ಜನರು ಹೂ ಮಾಲೆ ಹಾಕಿ, ಹೂವು ವೃಷ್ಟಿ ಮಾಡಿ ಗೌರವಿಸುವಾಗ ಒಬ್ಬ ಕುಹಕಿ ಅವರತ್ತ ಚಪ್ಪಲಿ ಎಸೆದನಂತೆ. ಭಕ್ತರು ಸಿಟ್ಟಿಗೆದ್ದು ಆತನನ್ನು ಹೊಡೆಯಲು ಹೋದಾಗ ಮಹಾತ್ಮರು ಹೇಳಿದರಂತೆ, "ಇರಲಿ, ಯಾರ ಬಳಿ ಏನಿದೆಯೋ ಅದನ್ನು ಅವರು ಕೊಡುತ್ತಾರೆ. ನಿಮ್ಮ ಬಳಿ ಹೂವು ಇತ್ತು ಕೊಟ್ಟಿರಿ. ಆತನ ಬಳಿ ಇರುವುದು ಚಪ್ಪಲಿ. ಅದನ್ನೇ ಕೊಟ್ಟಿದ್ದಾನೆ.

ಪೂಜ್ಯ ಗುರುಗಳ ಬಗ್ಗೆ ಅನೇಕರಿಗೆ ಅಸಹನೆ ತುಂಬಿದೆ. ಅದರಲ್ಲೂ ಸಾಹಿತಿಗಳಿಗೆ ಮತ್ತು ಮಠಾಧೀಶರಿಗೆ; ಏಕೆಂದರೆ ಬರೀ ಭಾಷಣದಲ್ಲಿ ಬಸವಣ್ಣನವರು ಸ್ತ್ರೀ ಸಮಾನತೆಯನ್ನು ಕೊಟ್ಟರು ಎಂದು ಹೇಳುತ್ತಾ ಒಬ್ಬ ಮಹಿಳೆಯನ್ನೂ ಮಠಾಧೀಶಳನ್ನಾಗಿ ಮಾಡದೆ ಇರುವ, ಒಬ್ಬರಿಗೂ ಜಂಗಮ ದೀಕ್ಷೆ ಕೊಟ್ಟು ಸನ್ಯಾಸಿನಿಯನ್ನಾಗಿ ತಯಾರು ಮಾಡದೆ ಇದ್ದ ಸಮಯದಲ್ಲಿ ಎಂಥಾ ಧೈರ್ಯದ ಹೆಜ್ಜೆಯನ್ನಿಟ್ಟರು ಪೂಜ್ಯ ಗುರುಗಳು! ನನ್ನಲ್ಲಿ ಒಂದು ವೇಳೆ ಪ್ರತಿಭೆ, ಬುದ್ಧಿ ಶಕ್ತಿ ಇದ್ದರೂ ಅದಕ್ಕೆ ಪ್ರೋತ್ಸಾಹ, ಆಶ್ರಯ ಸಿಗದೆ ಇದ್ದರೆ ಏನೇನೂ ಸಾಧಿಸದೆ ಯಾವುದೋ ಮೂಲೆಯಲ್ಲಿ ಶರಣಮ್ಮನಾಗಿ ಕೂತಿರಬೇಕಾಗುತ್ತಿತ್ತು. ನನಗೆ ನಿಜಕ್ಕೂ ಈಗ ಎಲ್ಲ ನೆನಪಿಸಿಕೊಂಡರೆ ಆಶ್ಚರ್ಯವಾಗುತ್ತದೆ, ಪೂಜ್ಯ ಗುರುಗಳು ಎಂಥಾ ಧೈರ್ಯಶಾಲಿಗಳು ಎಂದು! ಭಕ್ತ ವರ್ಗದಲ್ಲಿ ಹುಟ್ಟಿದವರು ಜಂಗಮರಾಗಲಾರರು ಎಂಬುದರ ಜೊತೆಗೆ ಮಹಿಳೆ ಜಂಗಮವಾಗಲಾರಳು ಎಂಬುದು ಬೇರೆ. ಇದೆಲ್ಲ ಎದುರಿಸಿ ಪೂಜ್ಯ ಗುರುಗಳು ನಮ್ಮನ್ನು ಪ್ರೋತ್ಸಾಹಿಸಿ, ಬೆಳೆಸಿದರು. ಮಹಿಳೆಯರನ್ನು ಬಳಸಿಕೊಂಡ ಸ್ವಾಮಿಗಳು, ಮಠಾಧೀಶರು ಅನೇಕರು ಸಿಗಬಹುದು. ಗುರುವನ್ನಾಗಿ, ಜಂಗಮವನ್ನಾಗಿ, ಜಗದ್ಗುರುನ್ನಾಗಿ ಮಾಡಿ ಮಹಿಳೆಯರನ್ನು ಬೆಳೆಸಿದ ಏಕೈಕ ಜಗದ್ಗುರು ಲಿಂಗಾನಂದ ಅಪ್ಪಾಜಿ!

"ಹುಲಿಯ ಮರಿ ಹುಲಿಯೇ ವಿನಾ ಹುಲ್ಲೆಯಾಗದು." ಎಂಬಂತೆ ಪೂಜ್ಯ ಗುರುಗಳು ನಡೆದ ದಾರಿಯಲ್ಲೇ ಇನ್ನಷ್ಟು ದಿಟ್ಟತನದಿಂದ ನಾನು ಸಾಗಿದುದು ಅನೇಕ ಮಠಾಧೀಶರಿಗೆ, ಸಾಹಿತಿಗಳಿಗೆ

ಸಂಕಟ ಹುಟ್ಟಿಸಿದೆ. ಅದಕ್ಕಾಗಿ ಅವರು ತಮ್ಮ ಬರಹಗಳಲ್ಲಿ ಕಾರಿಕೊಳ್ಳುತ್ತಾರೆ. ಒಂದು ವೇಳೆ ಪೂಜ್ಯ ಗುರುಗಳು ನಮ್ಮನ್ನು ಪ್ರೋತ್ಸಾಹಿಸದಿದ್ದರೆ ಈಗೇನು ಅನೇಕ ಜನ ಮಹಿಳೆಯರು ಪೂಜ್ಯ ಗಂಗಾ ಮಾತಾಜಿಯಂಥವರು ಸಹ ಜಂಗಮ ಮೂರ್ತಿಗಳಾಗುತ್ತಿರಲಿಲ್ಲ. ಆದರೆ ಒಂದು ಸತ್ಯವನ್ನು ನಾವು ಗುರುತಿಸಬೇಕು. ಜನ ಸಾಮಾನ್ಯರಿಂದ ಕೂಡಿದ ಒಂದು ಸಾಮಾಜಿಕ ಶಕ್ತಿ ಇದೆಯಲ್ಲ, ಅದು ಮಾತ್ರ ಸತ್ಯವನ್ನು ಎತ್ತಿ ಹಿಡಿಯುತ್ತದೆ; ಗುಣ ಗ್ರಾಹಕತ್ವದಿಂದ ಪ್ರೋತ್ಸಾಹಿಸುತ್ತದೆ. ಅನೇಕ ಸಾಹಿತಿಗಳಿಗೆ ನಮ್ಮ ಬಗ್ಗೆ ಅಸಹನೆ, ಕೋಪ, ಮತ್ಸರವೇಕೆಂದರೆ ಆರು ದೋಸೆ ಕೊಟ್ಟರೆ ಅತ್ತೆ ಕಡೆ ಮೂರು ದೋಸೆ ಕೊಟ್ಟರೆ ಸೊಸೆ ಕಡೆ ಎಂಬಂತೆ, ಸನ್ಮಾನಿಸುವವರ ಮನಸ್ಸಿಗೆ ಸಮಾಧಾನ ತರುವಂತೆ, ಜಾತಿ ಅಭಿಮಾನದ ಆಧಾರದ ಮೇಲೆ ಸತ್ಯವನ್ನು ಮುಚ್ಚಿಟ್ಟು ಸಾಹಿತ್ಯ ಬರೆಯುತ್ತ ತಿಪ್ಪೆ ಸಾರಿಸುವ ಕೆಲಸವನ್ನೇ ಅನೇಕರು ಮಾಡುತ್ತಿದ್ದರು. ನಾವು ಸ್ಪಷ್ಟ ಶಬ್ದಗಳಲ್ಲಿ ಸತ್ಯವನ್ನು ಬಿಚ್ಚಿಡುತ್ತಾ ಹೋಗುತ್ತಿರುವುದು ಇಂಥವರಿಗೆ ಸಂಕಟ ತಂದಿದೆ. ಮತ್ತು ಅವರ ವಿಚಾರಧಾರೆ ಹೆಚ್ಚಿನ ಜನರನ್ನು ತಲುಪದೆ 500, 1000 ಪ್ರತಿ ಪುಸ್ತಕಗಳಲ್ಲೇ ಒದ್ದಾಡುತ್ತಿರುವುದು. ಹೀಗಾಗಿ ಸಂಕಟ ಪಡುತ್ತಾರೆ. ಆದ್ದರಿಂದ ಮತ್ಸರಿಗರ ಮಧ್ಯದಲ್ಲೇ ಬದುಕುವ, ಸಾಧಿಸುವ ಸಹನೆ ಮತ್ತು ಆತ್ಮಬಲವನ್ನು ನಾವೂ ನೀವೂ ಬೆಳೆಸಿಕೊಳ್ಳಬೇಕು.

ಅಶೋಕ ಅಳ್ನಾವರ, ಕಿತ್ತೂರು

? ಚಿದಾನಂದ ಮೂರ್ತಿಯವರು ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರಲ್ಲ, ವೀರಶೈವ ಮೊದಲೇ ಇತ್ತು ಎಂದಿರುವುದಾಗಿ ವಿಜಯ ಕರ್ನಾಟಕದ ದಿ.17-3-2006ರ ಪತ್ರಿಕೆಯಲ್ಲಿ ಬಂದಿದೆ. ಇದರಿಂದ ನಮ್ಮ ತಾಳ್ಮೆ ಕೆಡುತ್ತಿದೆ. ಇವರ ಬಾಯಿ ಮುಚ್ಚಿಸುವುದು ಹೇಗೆ?

★ ವೀರಶೈವದ ಬಗೆಗೆ ಮಾತಾಡಲು ಅವರಿಗೆ ಹಕ್ಕಿದೆ. ಬಸವಣ್ಣನವರು-ಲಿಂಗಾಯತ ಧರ್ಮದ ಬಗ್ಗೆ ಮಾತನಾಡಲು ಅವರಿಗೆ ಯಾವ ಹಕ್ಕೂ ಇಲ್ಲ. ಅವರು ವದರುತ್ತಲೇ ಇರಲಿ. ನೀವುಗಳು ಇನ್ನಷ್ಟು ಗಟ್ಟಿ ಧ್ವನಿಯಿಂದ ವಚನ ಸಾಹಿತ್ಯ, ಲಿಂಗಾಯತ ಧರ್ಮದ ಬಗ್ಗೆ ಮನೆ ಮನೆಗೂ ಪ್ರಚಾರ ಮಾಡಿರಿ. ಇಂದು ಬೆಳಿಗ್ಗೆ (ದಿ.18-3-2006) ಹಾಗೆಯೇ ಆಲೋಚಿಸುತ್ತಿದ್ದೆ. ಲಿಂಗಾಯತ ಗಣ ಮೇಳದ ಬಗ್ಗೆ ಕಾರ್ಯಕರ್ತರು ಮಹಾರಾಷ್ಟ್ರದ ಹಳ್ಳಿಗಳಲ್ಲಿ ಜೀಪು ತಗೊಂಡು ಅನೌನ್ಸ್‌ಮೆಂಟ್ ಮಾಡುತ್ತ ಹೋದಾಗ, ಜ್ಯೋತಿಯಾತ್ರೆ ಹೋದಾಗ ಜನರು ಬೆಲ್ಲಕ್ಕೆ ಇರುವೆಯಂತೆ ಮುತ್ತುತ್ತಾರಂತೆ. ಲಿಂಗಾಯತರಿಗೆ ತಮ್ಮ ಧರ್ಮವೇನು ? ಧರ್ಮಗುರು ಯಾರು ? ಏನೂ ಗೊತ್ತಿಲ್ಲ. ಅವರು ಹೇಳುವರಂತೆ, ನಮಗೆ ಗೊತ್ತಿರುವುದು ನಾವು ಲಿಂಗಾಯತ ಜಾತಿಯವರು, ಬಸವಣ್ಣ ನಮ್ಮ ಗುರು; ಇದಿಷ್ಟೆ! ಬಸವ ಎಂಬ ಹೆಸರು ಕೇಳುತ್ತಲೇ ಅವರಿಗೆ ಮುಗ್ಧ ಸಂತೋಷ. ನಿರ್ಜೀವವಾಗಿ ಮಲಗಿರುವ ಲಿಂಗಾಯತ ಸಮಾಜದ ನಾಡಿಯಲ್ಲಿ ಅವರಿಗೆ ಅರಿಯದಂತೆ ಮಿಡಿಯುತ್ತಿರುವುದು "ಬಸವ ನಾಮ" ತೀರಾ ಅಶಿಕ್ಷಿತನಾದ ಕುಗ್ರಾಮದ ಮೂಲೆಯಲ್ಲಿರುವ ಲಿಂಗಾಯತನಿಗೂ ಬಸವಣ್ಣನವರ ಹೆಸರು ಗೊತ್ತಿದೆ. ಅದೇ ವೀರಶೈವರು ಆಂಧ್ರ, ತಮಿಳುನಾಡು, ಕೇರಳಗಳಲ್ಲಿದ್ದಾರಲ್ಲ ಅವರಿಗೇಕೆ ರೇಣುಕಾಚಾರ್ಯರು ತಮ್ಮ ವೀರಶೈವ ಮತದ ಗುರು ಎಂದು ಗೊತ್ತಿಲ್ಲ. ಕೇವಲ ಕರ್ನಾಟಕದಲ್ಲಿರುವ ವೀರಶೈವವಾದಿಗಳು ಮಾತ್ರ 20ನೆಯ ಶತಮಾನದ ಉತ್ತರಾರ್ಧದಿಂದ ರೇಣುಕಾದಿ ಆಚಾರ್ಯರ ಹೆಸರು ಹೇಳುತ್ತಾರೆ. ಮಗುವಿನ ತಂದೆ ತಾಯಿ ಯಾರು ಎಂದು ಖಚಿತ ಪಡಿಸಿಕೊಳ್ಳಲು DNA ಟೆಸ್ಟ್ ಮಾಡುವಂತೆ ಯಾವುದೇ ರಾಜ್ಯ - ರಾಷ್ಟ್ರದಲ್ಲಿರುವ ಲಿಂಗಾಯತ ಸಮಾಜದ ಡಿಎನ್‌ಎ ಟೆಸ್ಟ್ ಮಾಡಿದರೆ ಬಸವಣ್ಣನವರು ಇದರ ಜನಕರೆಂಬುದು ಸ್ಪಷ್ಟವಾಗುವುದು.

ಡಿ.ಆರ್.ಪಾಟೀಲ್, ಬಸವ ಸಂಗಮ, ಬೆಳಗಾವಿ

? ಕಲ್ಯಾಣ ಕಿರಣ ಮಾರ್ಚ್ ಸಂಚಿಕೆ ನೋಡಿ ಆಘಾತವಾಯಿತು ಮತ್ತು ನೋವಾಯಿತು. ಈ ಬಗ್ಗೆ ಸಂದೇಹವನ್ನು ಪರಿಹರಿಸಿಕೊಳ್ಳಬಯಸಿ, ಪ್ರಶ್ನೆ ಕಳಿಸಿದ್ದೇನೆ, ಉತ್ತರಿಸಿರಿ?

? ಹೊದ್ದಿಕೆಯ ಎರಡನೆಯ ಪುಟದಲ್ಲಿ ಕಾರ್ಯಕ್ರಮದ ಫೋಟೋ ಇದೆ. ಅದರಲ್ಲಿ ಪರಮೇಶ್ವರನ ಭಾವಚಿತ್ರ ಇಡಲಾಗಿದೆ. ಅದು ಧರ್ಮಗುರು ಬಸವಣ್ಣನವರ ಭಾವಚಿತ್ರಕ್ಕಿಂತಲೂ ದೊಡ್ಡದಿದೆ. ಒಂದನೆಯದಾಗಿ ಇದು ಧರ್ಮಗುರುವಿಗೆ ಅವಮಾನ ಮಾಡಿದಂತೆ ಅಲ್ಲವೆ? ಮತ್ತು

ಏಕದೇವೋಪಾಸನೆಗೆ ಚ್ಯುತಿ ತರದೆ? ಗುರು ಲಿಂಗ ಜಂಗಮದ ಹೊರತಾದಿ ಅನ್ಯ ದೇವತೆಯನ್ನು ಪೂಜಿಸಬಾರದಲ್ಲವೆ?

★ ಆ ಚಿತ್ರ ಶಿವರಾತ್ರಿಯ ದಿನದ ಕಾರ್ಯಕ್ರಮದ ಚಿತ್ರವಿದೆ. ಶಿವರಾತ್ರಿಯ ದಿನ ಅಂದರೆ ಐತಿಹಾಸಿಕ ಯುಗಪುರುಷ ಶಿವನಿಗೆ ಸಂಬಂಧಿಸಿದ ದಿನ(ದ ರಜೆಯನ್ನು)ವನ್ನು ನಾವು ಶರಣ ಗಣ ಮೇಳ ಮತ್ತು ಸರ್ವ ಶರಣರ ದಿನಾಚರಣೆಗೆ ಬಳಸಿಕೊಳ್ಳುತ್ತಿದ್ದೇವೆ. (ನಾಮಕ ವಾಸ್ತೆ ಲಿಂಗಾಯತರು ಸಾಂಪ್ರದಾಯಿಕವಾಗಿ ವರ್ಷದಲ್ಲಿ ಅದೊಂದು ದಿನವಾದರೂ ಇಷ್ಟಲಿಂಗಪೂಜೆ ಮಾಡುವುದುಂಟು.) ಅಂಬೇಡ್ಕರ್ ಜಯಂತಿ ದಿನ ಅಂಬೇಡ್ಕರ್ ಭಾವಚಿತ್ರ ಹೀಗೆ ಐತಿಹಾಸಿಕ ಮಹಾಪುರುಷರ ಪಟ ಇಟ್ಟು ಅವರಿಗೆ ಗೌರವಿಸುವ ಪರಿಪಾಠ ರಾಷ್ಟ್ರೀಯ ಬಸವ ದಳಗಳಲ್ಲಿ ಇದೆ. ಒಂದು ರಾಷ್ಟ್ರದ ಪರಂಪರೆಯ ದೃಷ್ಟಿಯಿಂದ ಇದು ಅವಶ್ಯವಿದೆ. ಶಿವನು (ಪರಮೇಶ್ವರ ಎಂದು ನಾವು ಕರೆಯುವುದಿಲ್ಲ. ಪರಮ + ಈಶ್ವರ ಅಂದರೆ Absolute reality-Creator ಎಂದು ಅರ್ಥ) ಒಬ್ಬ ಮಹಾಯೋಗಿ; ಅದಕ್ಕಾಗಿ ಶಿವನ ಭಾವಚಿತ್ರ ಇಡಲಾಗಿದೆ. ಧರ್ಮಗುರುವಿನ ಪೂಜೆ ನಡೆಯುತ್ತದೆ. ಶಿವರಾತ್ರಿಗೆ ಇಡಲು ಬೇರೆ ಕಡೆಯಿಂದ ತಂದ ಫೋಟೋ ಅಕಸ್ಮಾತ್ ಬಸವಣ್ಣನವರ ಭಾವಚಿತ್ರಕ್ಕಿಂತ ದೊಡ್ಡದಿದೆ ಅಷ್ಟೆ. ಅಲ್ಲಿ ಶಿವನನ್ನು ಭಾವಚಿತ್ರ ಇಡುವ ಮೂಲಕ ಗೌರವಿಸಲಾಗಿದೆ. ಭಾರತ ದೇಶದಲ್ಲಿ ಬಂದಿರುವ ಪರಂಪರೆ ಎರಡು ಶೈವ ಮತ್ತು ವೈದಿಕ, ಆಗಮಿಕ-ವೇದೋಕ್ತ. ಬಸವ ಪರಂಪರೆ ಶೈವ ಸಂಸ್ಕೃತಿಯದು. ಅದಕ್ಕಾಗಿ ಇಲ್ಲಿ ಶಿವಪರವಾದ ಹೆಸರುಗಳು ಕಾಣಬರುತ್ತವೆ, ನಾವು ಧರಿಸುವ ವಿಭೂತಿ ಮತ್ತು ರುದ್ರಾಕ್ಷಿ ಮುತ್ತಜ್ಜ ಶಿವನಿಂದ ಪಡೆದಂಥವು ಎಂಬುದನ್ನು ಮರೆಯಲಾದೀತೆ? ಶಿವನಿಗೆ ಲಿಂಗಾಯತ ಧರ್ಮದಲ್ಲಿ ಕೊಡಬಹುದಾದ ಸ್ಥಾನವೇನು? ಎಂಬ ಬಗ್ಗೆ ಮುಕ್ತ ಚರ್ಚೆ ಇಡಬೇಕೆಂದಿದ್ದೇನೆ. ನಿಮ್ಮಂತಹವರು ಶರಣ ಮೇಳದ ದಿ.11 ಮತ್ತು 12 ನಡೆಯುವ ಚಿಂತನಗೋಷ್ಠಿಯಲ್ಲಿ ಪಾಲ್ಗೊಳ್ಳಬೇಕು. ಇದು ಬಹು ಮುಖ್ಯ ಸಮಸ್ಯೆಯಾಗಿದೆ. ಏಕೆಂದರೆ ಬಹುಪಾಲು ಶಿವದೇವಾಲಯಗಳು ಲಿಂಗಾಯತರ ಆಡಳಿತದಲ್ಲಿವೆ. ಅವರಿಗೆ ಶಿವ ಮತ್ತು ಗುರುಬಸವಣ್ಣನವರಲ್ಲಿ ಯಾರನ್ನು ಹಿಡಿಯಬೇಕು; ಯಾರನ್ನು ಬಿಡಬೇಕು? ಎಂಬ ಬಗ್ಗೆ ಬಹಳ ತುಮುಲ ನಡೆದಿದೆ. ಮಹಾರಾಷ್ಟ್ರದ ಒಂದು ಊರಲ್ಲಿ 8 ಶಿವಾಲಯಗಳಿದ್ದು ಯಾರೂ ಗಮನ ಕೊಡದೆ ಅವುಗಳೆಲ್ಲ ಮಸೀದಿಗಳಾಗಿವೆಯಂತೆ. ಒಮ್ಮೆ ಚರ್ಚೆ ಇಡೋಣ; ಬಂದು ಭಾಗವಹಿಸಿರಿ.

ಪ್ರಶ್ನೆ 2 : ವಿಶ್ವಗುರು ಬಸವಣ್ಣನವರೇ ಆಗಲಿ. ಅವರ ಸಮಕಾಲೀನರೇ ಆಗಲಿ ಯಾವುದೇ ವ್ರತಗಳನ್ನು ಆಚರಿಸಲು ಹೇಳಿಲ್ಲ ಹೀಗಿರುವಾಗ 40,30,20,10 ದಿವಸಗಳ ಶರಣ ವ್ರತ ಆಚರಣೆ ರೂಢಿಗೆ ತರುವುದು ತಪ್ಪಲ್ಲವೆ? ಇದು ಅಯ್ಯಪ್ಪ ಸ್ವಾಮಿ ಅನುಕರಣೆಯವಲ್ಲವೆ?

★ ಅಹುದು; ಅಯ್ಯಪ್ಪ ವ್ರತ ಮತ್ತು ವಾರಕರಿ ವ್ರತದ ಅನುಕರಣೆ. ವ್ರತವನ್ನು ಆರಂಭಿಸುವಾಗಲೇ ಇದನ್ನು ಸ್ಪಷ್ಟವಾಗಿ ಬರೆದಿದ್ದೇನೆ. ಏಕೆಂದರೆ ನಿಜ(ನೀಚ ಅಲ್ಲ) ಲಿಂಗಾಯತನು ಗುರುವಿನಿಂದ ಅನುಗ್ರಹ ಹೊಂದಿ, ಇಷ್ಟಲಿಂಗವನ್ನು ಆಯತ ಮಾಡಿಕೊಂಡು, ನಿತ್ಯ ಲಿಂಗಾರ್ಚನೆ ಮಾಡುವುದರಿಂದ ಅವನ ಇಡೀ ಜೀವನವೇ ಒಂದು ವ್ರತ. ಏನು ಮಾಡುವುದು ಲಿಂಗಾಯತ ಸಮಾಜವು ಶಿಥಿಲಗೊಂಡಷ್ಟು ಬೇರೆ ಯಾವುದೂ ಶಿಥಿಲಗೊಂಡಿಲ್ಲ. ಅಯ್ಯಪ್ಪ, ವಾರಕರಿ, ಬ್ರಹ್ಮಕುಮಾರಿ, ಕಲ್ಕಿ, ಯಲ್ಲಮ್ಮ, ಸಾಯಿಬಾಬಾ ಎಲ್ಲದಕ್ಕೂ ಇವರದೇ ಮೊದಲ ಹಾಜರಿ. Convent ಕಾನ್ವೆಂಟ್ ಎಂಬ ಪದದ ಅರ್ಥ -ಕ್ರೈಸ್ತ ಸನ್ಯಾಸಿ (ಸನ್ಯಾಸಿನಿ) ವಾಸಿಸುವ ಮಠ ಎಂದು. ಹೇಗೆ ಮೊದಲು ಲಿಂಗಾಯತರ ಮಠಗಳು "ಸಾಲೆಯ ಮಠ" ಆಗಿದ್ದವೋ ಹಾಗೆ ಕ್ರೈಸ್ತ ಮಠಗಳಲ್ಲಿ ವಿದ್ಯೆ ಕಲಿಸಲಾಗುತ್ತಿತ್ತು. ಕಾನ್ವೆಂಟ್ ಅಂದರೆ ಕ್ರೈಸ್ತರು ನಡೆಸುವ ಶಾಲೆ ಎಂದಾದಾಗ ಭಾರತೀಯರು, ಹಿಂದುಗಳು ಅವುಗಳಿಗೆ ಮುಗಿ ಬೀಳತೊಡಗಿದಾಗ, ಅಂಥ ಮೂರ್ಖ ತಂದೆ ತಾಯಿಗಳನ್ನು ಆಕರ್ಷಿಸಲು ಲಿಂಗಾಯತ ಮತ್ತು ಹಿಂದುಗಳು ಸಹ ಸಿದ್ಧಲಿಂಗೇಶ್ವರ ಕಾನ್ವೆಂಟ್, ವಿವೇಕಾನಂದ ಕಾನ್ವೆಂಟ್ ಶುರು ಮಾಡಿದರು.

ಕರಿಯ ಬಟ್ಟೆ ಹಾಕಿಕೊಂಡು ದುಡುದುಡು ಹೋಗುವ ಮೂಢರನ್ನು ಸ್ವಧರ್ಮಕ್ಕೆ

ಆಕರ್ಷಿಸಲೆಂದೇ ಶರಣ ವ್ರತ ಆರಂಭಿಸಿದ್ದೇನೆ. ಸಕಲಟ್ಟಿ, ಕಾಟೇರಿ ಜನ-ಕರಿಬಟ್ಟೆ ಹಾಕಿಕೊಂಡು ಅಯ್ಯಪ್ಪನಿಗೆ ಹೋಗುತ್ತಿದ್ದ ಲಿಂಗಾಯತರು ಈಗ ಬಿಳಿ ಬಟ್ಟೆ ಹಾಕಿಕೊಂಡು ಶರಣವ್ರತ ಮಾಡಿ, ಶರಣ ಮೇಳಕ್ಕೆ ಬರುತ್ತಿದ್ದಾರೆ. ಒಂದು ಊರಲ್ಲಿ ಒಬ್ಬ ಶರಣರು ಬೇಕರಿ ಇಟ್ಟಿದ್ದಾರೆ. ಕೇಕ್‌ಗೆ ಮೊಟ್ಟೆ ಹಾಕುತ್ತಾರೆಂಬುದು ನಮಗೆ ತಿಳಿದಾಗ ಅವರನ್ನು ಪ್ರಶ್ನಿಸಿದೆವು. ಅವರು ಕೇಳಿದರು ಜನರು ಕೇಳುತ್ತಾರೆ ಎಂದು ಕೇಕ್ ಮಾಡುತ್ತೇವೆ. ಆದರೆ ಅದರೊಳಗೆ ಮೊಟ್ಟೆ ಹಾಕದೆ ಮಾಡಿರುತ್ತೇವೆ ಎಂದರು. ಒಂದು ಚಟ ಬಿಡಸಬೇಕಾದರೆ ಏನಾದರೂ ಮತ್ತೊಂದನ್ನು ಪರ್ಯಾಯವಾಗಿ ಕೊಡಬೇಕಾಗುತ್ತದೆ. ಶರಣ ವ್ರತದ ಮುಖ್ಯ ವಿಧಿ(ritual) ಗುರು ಬಸವ ಪೂಜೆ - ಇಷ್ಟಲಿಂಗ ಪೂಜೆ ಮತ್ತು ವಚನ ಪಾರಾಯಣ. ವರ್ಷವಿಡೀ ಮಾಡಲಾಗದವರೂ ಸಹ ಶರಣ ವ್ರತದ ಕಾಲದಲ್ಲಿ ವಚನಾಧ್ಯಯನವನ್ನು ಒಂದು ನಿಯಮ ಎಂದು ಮಾಡಿದಾಗ ಅವರು ಜ್ಞಾನಿಗಳಾಗಬಹುದಲ್ಲವೆ?

ಪ್ರ.3 ? ನವರಾತ್ರಿಯಲ್ಲಿ ನಾವು 9 ದಿವಸ ಘಟ್ಟ ಕೂರಿಸಿ ದೀಪ ಉರಿಸುತ್ತಿದ್ದೆವು. ಎಣ್ಣೆಯ ಅಪವ್ಯಯ ಎಂಬುದಾಗಿ ತಮ್ಮಿಂದ ತಿಳಿದ ಬಳಿಕ ಆ ಪದ್ಧತಿ ಬಿಟ್ಟು ಬಿಟ್ಟಿದ್ದೇವೆ. ಈಗ ತಾವು ಮನೆ ಮನೆಗೆ ಬಸವ ಜ್ಯೋತಿ ಎಂದು 33 ದಿವಸಗಳ ಕಾಲ ಹಗಲು-ರಾತ್ರಿ ಆರದ ಹಾಗೆ ನೋಡಿಕೊಳ್ಳಲು ಹೇಳಿದ್ದೀರಿ. ಇದರಿಂದ ನಮಗೆಲ್ಲ ಆತಂಕವಾಗಿದೆ. ಪುನಃ ಹಿಂದಿನ ಸಾಂಪ್ರದಾಯಿಕ ಆಚರಣೆಗೆ ಕರೆದೊಯ್ಯುತ್ತಿದ್ದೀರಲ್ಲವೆ?

★ 33 ದಿವಸ ದೀಪ ಉರಿಸಲು ನಾನು ಎಲ್ಲಿಯೂ ಹೇಳಿದ, ಬರೆದ, ಸೂಚಿಸಿದ ನೆನಪು ಇಲ್ಲ. ಅರವತ್ತಕ್ಕೆ ಅರುಳು ಮರುಳು ಅಂತಾರಲ್ಲ, ಹಾಗೇನಾದರೂ ಹೇಳಿ, ಬರೆದು ಮರೆತಿದ್ದೇನೊ? ಎಲ್ಲಿ ಪ್ರಕಟಿಸಲಾಗಿದೆ ಎಂಬುದನ್ನು ನಮ್ಮ ಗಮನಕ್ಕೆ ತನ್ನಿರಿ. ಮನೆ ಮನೆಗೆ ಬಸವ ಜ್ಯೋತಿ ಎಂಬುದು ಕೇವಲ ಕಾರ್ಯಕ್ರಮದ ಹೆಸರು. ಅದು ಜ್ಯೋತಿ ಉರಿಸುವುದಲ್ಲ. ಶ್ರಾವಣ ಪ್ರತಿಪದೆಯಿಂದ ಭಾದ್ರಪದ ತೃತೀಯವರೆಗೆ ದಿನಾಲು ಒಬ್ಬೊಬ್ಬರ ಮನೆಯಲ್ಲಿ "ಬಸವ ಜ್ಯೋತಿ" ಕಾರ್ಯಕ್ರಮ ಇಟ್ಟು, ಪೂಜೆ-ಪ್ರಾರ್ಥನೆ- ಪ್ರವಚನ-ಪ್ರಸಾದ ವಿತರಣೆ ಮಾಡಿ, ಭಾದ್ರಪದ ಚೌತಿಯಂದು ಸಾಮೂಹಿಕವಾಗಿ ಶರಣ ಸಮಾಗಮ ಏರ್ಪಡಿಸಬೇಕು. ಈ ರೀತಿ ಸೂಚನೆ ನೀಡಲಾಗಿದೆ. ತುಂಬಾ ಯಶಸ್ವಿಯಾಗಿ ಬಸವ ಜ್ಯೋತಿ ಕಾರ್ಯಕ್ರಮ ಎಲ್ಲೆಡೆ ನಡೆಯುತ್ತಲಿದೆ. ಇದೂ ಒಂದು ಪರ್ಯಾಯ ವ್ಯವಸ್ಥೆ. ಶ್ರಾವಣದಲ್ಲಿ ಒಂದು ದಿನವಾದರೂ ಜಂಗಮ ದಾಸೋಹ ಮಾಡಬೇಕೆಂಬ ಜನರ ನಂಬಿಕೆಗೆ ಪೂರಕವಾದ ಅರ್ಥಪೂರ್ಣ ಜ್ಞಾನ ಪ್ರಧಾನ ಆಚರಣೆ; ಲಿಂಗಾಯತ ಧರ್ಮದ ಪವಿತ್ರ ಸಮಾವೇಶಗಳಾದ ಶರಣ ಮೇಳ ಮತ್ತು ಕಲ್ಯಾಣ ಪರ್ವಗಳ ಬಗ್ಗೆ ಎಲ್ಲರಲ್ಲಿ (ಮುಸಲ್ಮಾನರಲ್ಲಿ ಹಜ್ ಬಗ್ಗೆ ಶ್ರದ್ಧೆ ಇರುವಂತೆ) ಶ್ರದ್ಧೆ ಬೆಳೆಯಲೆಂದು 5 ದಿವಸ, 3 ದಿವಸ ನಡು ಮನೆಯಲ್ಲಿ ಒಂದು ಮಂಟಪ ರಚಿಸಿ, ಧರ್ಮಪಿತರ ಭಾವಚಿತ್ರ ಇಟ್ಟು ಅಲಂಕರಿಸಿ, ಶರಣ ಜ್ಯೋತಿ, ಕಲ್ಯಾಣ ಜ್ಯೋತಿ ಎಂದು ಹೆಸರಿಟ್ಟು ದೀಪ ಹಚ್ಚಿಡಬೇಕು. ಇದರಿಂದ ಮನೆಗೆ ಬಂದವರು ಇದೇನು ಎಂದಾಗ "ಕೂಡಲ ಸಂಗಮದಲ್ಲಿ 5 ದಿನ ಶರಣ ಮೇಳವಿದೆ", "ಬಸವ ಕಲ್ಯಾಣದಲ್ಲಿ 3 ದಿನಗಳ ಕಲ್ಯಾಣ ಪರ್ವವಿದೆ ಎಂದು ಹೇಳುವ ಮೂಲಕ ಜನರಲ್ಲಿ ಉಭಯ ಸಮಾವೇಶಗಳ ಬಗ್ಗೆ ಪೂಜ್ಯ ಭಾವ ಬೆಳೆಸಬಹುದು. ಇದು ಸಮಾಜ ಸಂಘಟನೆಯ ಸೂತ್ರ ಆಗಬಲ್ಲುದು. ಧಾರ್ಮಿಕ ಶ್ರದ್ಧೆ ಬೆಳೆಯದೆ ಬರೀ ಭಾಷಣಗಳ ಮಾಲೆ ಹೆಣೆಯುವುದರಿಂದ ಧರ್ಮವು ನೆಲೆಗೊಳ್ಳದು." ಏನೇ ಭಿನ್ನಾಭಿಪ್ರಾಯ, ಅಸಮ್ಮತಿ ಇದ್ದರೆ ಅದನ್ನು ವ್ಯಕ್ತಪಡಿಸಲು 4 ಚಿಂತನಗೋಷ್ಠಿಗಳಲ್ಲಿ ಅವಕಾಶ ನೀಡಲಾಗುತ್ತದೆ. ಮನವರಿಕೆ ಮಾಡಿಕೊಟ್ಟರೆ ಸೂಕ್ತವೆನಿಸಿದರೆ ತಿದ್ದುಪಡಿ ಸಹ ಮಾಡಲು ನಾವು ಸಿದ್ಧರಿರುತ್ತೇವೆ.

ಸಂಜಯ ಪಾಟೀಲ್, ಗೋಕಾಕ್

ಬೆಳಗಾಂವಿಯಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಅರವಿಂದ ಜತ್ತಿಯವರು ತಮ್ಮ ಬಗ್ಗೆ ಪ್ರಸ್ತಾಪಿಸುತ್ತಾ "ವಚನಾಂಕಿತ ಲಿಂಗದೇವ ಮಾಡಿದ್ದು ಸರಿಯಲ್ಲ." ನಾನೂ ಅರವಿಂದ ದೇವ ಎಂದು ಬದಲು ಮಾಡಲು ಬರುವುದೇ ಎಂದು ಟೀಕಿಸಿದರು. ಸಭೆಯಲ್ಲಿದ್ದ ನನಗೆ ಬಹಳ ಕೋಪ ಬಂದಿತು?

★ ಕೋಪ ಏಕೆ ಮಾಡಿಕೊಳ್ಳುತ್ತೀರಿ? ಅರವಿಂದ ಜತ್ತಿಯವರು ತತ್ತ್ವಜ್ಞಾನದ ಆಳ ತಿಳಿದು ಮರುಕ ಪಡಿ. ಲಿಂಗದೇವ ಧರ್ಮಪಿತ ಬಸವಣ್ಣನವರ ಸಿದ್ಧಾಂತ, ದರ್ಶನ ಶಾಸ್ತ್ರ ಏಕದೇವೋಪಾಸನೆ ಪ್ರತಿಬಿಂಬಿಸುವ

ಏಕೈಕ ಪದ. ನಾವು ಧರಿಸಿ ಪೂಜಿಸುವುದು ಇಷ್ಟಲಿಂಗದೇವ ಎಂಬ ಆತ್ಮ ವಿಶ್ವಾಸ, ತತ್ತ್ವಜ್ಞಾನದ ಬಲದ ಮೇಲೆ ನಾನು ಬದಲಾವಣೆ ಮಾಡಿದ್ದೇನೆ. ಒಂದು ವೇಳೆ ಆತ್ಮಬಲವಿದ್ದು, ಸಮರ್ಥಿಸಿಕೊಳ್ಳಬಲ್ಲ ತತ್ತ್ವಜ್ಞಾನದ ಹಿನ್ನೆಲೆ ಅರವಿಂದ ಜತ್ತಿ ಅವರಿಗೆ ಇದ್ದರೆ ಅರವಿಂದದೇವಾ ಎಂದು ಮಾಡಲಿ. ಒಂದು ತತ್ತ್ವಕ್ಕೂ ಗಟ್ಟಿಯಾಗಿ ಬದ್ಧರಾಗದ ಅವರು 'ಲಿಂಗದೇವ' ಅರ್ಥವಾಗದೆ ಇದ್ದರೆ ಮೌನ ತಾಳಿರಲಿ.

☐ ನಾಗಶೆಟ್ಟಿ ಶೆಟಕಾರ್, ಬೀದರ್

? ಬಸವರಾಜ ಮೂಲಗೆ ಎಂಬ ಓರ್ವ ವ್ಯಕ್ತಿ ತತ್ತ್ವಜ್ಞಾನ ಎಂ.ಎ ಮಾಡಿದರು. ಅವರ ಆಸಕ್ತಿ ನೋಡಿ ನಾವು ಅವರ ಬಗ್ಗೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದವು. ಕಾವಿಯನ್ನು ತಾನೇ ಹಾಕಿಕೊಂಡು ಗುಡ್ಡದ ಮೇಲೆ ಕುಳಿತು ನೀರು ಮಂತ್ರಿಸುವ, ತಾಯಿತ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಇದಕ್ಕೆ ನೀವೇನು ಅಂತಿರಿ?

★ ನೀರು ಮಂತ್ರಿಸಿ, ತಾಯಿತ ಕಟ್ಟೋ ಸಲುವಾಗಿ ಎಂ.ಎ.ತತ್ತ್ವಜ್ಞಾನ, ಯೋಗ, ಡಿಪ್ಲೋಮ ಮುಂತಾದ್ದಕ್ಕೆ ಏಕಷ್ಟು ಕಷ್ಟ ಪಟ್ಟು ಓದಬೇಕಿತ್ತೋ? ಸಾಧಕರ ಜೀವನದಲ್ಲಿ ಕಾಮಿನಿ (ಸ್ತ್ರೀಯರಿಗೆ ಪುರುಷ) ಕನಕ (ಧನ), ಕೀರ್ತಿ ಮುಂತಾದವು ಮಾಯೆಗಳಾಗಿ ಬರುತ್ತವೆ. ಅವೆಲ್ಲ ಆಮಿಷ ದಾಟ ಉದಾತ್ತ ಗುರಿ ಎಡೆಗೆ ಸಾಗಬೇಕಾಗುತ್ತದೆ. ಬಹಳ ಜನರು ಅಲ್ಪ ತೃಪ್ತಿಯಲ್ಲೇ ಲಗಾಟೆ ಹೊಡೆದು ಬಿಡುತ್ತಾರೆ. ಸಮಾಜ ಕಟ್ಟಲು ಉಪಯೋಗವಾಗಬೇಕಾದ ವ್ಯಕ್ತಿ ಹೀಗೆ ಸಮಾಜವನ್ನು ಮೂಢತನಕ್ಕೆ ಕೊಂಡೊಯ್ಯುತ್ತಿರುವುದಕ್ಕೆ ವಿಷಾದ ಪಡಬೇಕು ಅಷ್ಟೆ!

☐ ಕೆ.ಬಸವರಾಜು ಅಧ್ಯಕ್ಷರು. ರಾ.ಬ.ದಳ, ಬೆಳಗಾವಿ

? ಲಿಂಗಾಯತ ಸಂಘಟನೆ ಎಂಬ ಒಂದು ಸಂಸ್ಥೆಯವರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆಶೀರ್ವಚನ ಮಾಡಿದ ಗದಗಿನ ತೋಂಟದಾರ್ಯ ಸ್ವಾಮಿಗಳು ಎಷ್ಟು ಕೆಳಮಟ್ಟದ ಪದಗಳನ್ನು ಬಳಸಿ ತಮ್ಮನ್ನು ನಿಂದಿಸಿದರೆಂದರೆ ಕೇಳುವವರಿಗೇ ಕಷ್ಟವಾಯಿತು. ದುಷ್ಟ ಹೆಂಗುಸು, ಕೆಟ್ಟ ಹೆಂಗುಸು ಎಂದೆಲ್ಲ ಬೈದರು. ಇದು ಅಂಥ ಸ್ಥಾನದಲ್ಲಿರುವ ಅವರಿಗೆ ಯೋಗ್ಯವೆ?

★ ಯೋಗ್ಯವೇ ಅಯೋಗ್ಯವೆ ಎಂದು ನಿಮ್ಮಂತಹ ಉದಾತ್ತ ಶರಣ ಸಂಸ್ಕಾರ ಇರುವವರು ಮಾತ್ರ ಆಲೋಚಿಸುವುದು. ನೀವು ಶ್ರೀಗಳ ವ್ಯಕ್ತಿತ್ವ, ಭಾಷಣ ಗಮನಿಸಿರಿ. ಅವರು ಯಾವುದಾದರೂ ಒಂದು ವಿಷಯ (Subject) ಸೈದ್ಧಾಂತಿಕ ಪರಿಕಲ್ಪನೆ (Philosophical concept) ಕುರಿತು ಎಂದಾದರೂ ವಿಷಯ ನಿರೂಪಣೆ ಮಾಡುವರೇ ಎಂಬ ಬಗ್ಗೆ ಗಮನಿಸಿರಿ. ವೇದಿಕೆಯ ಮೇಲಿರುವ ರಾಜಕಾರಣಿ/ಸಾಹಿತಿ/ ದಾನಿ/ ಭಾಷಣಕಾರ ಮುಂತಾದವರನ್ನು ಹೊಗಳಿ ಹೊಗಳಿಸಿಕೊಳ್ಳುವವರಿಗೆ ಮತ್ತು ಕೇಳುವವರಿಗೇ ಸಂಕೋಚವಾಗುವಂತೆ ಹೊಗಳುತ್ತಾರೆ. ಈ ಸ್ವಭಾವದ ಇನ್ನೊಂದು ಮುಖವೇ ತೆಗಳುವಿಕೆ. Tongue is the visible part of intestine ಎಂಬ ಲೋಕೋಕ್ತಿಯಂತೆ ಅಂತರಂಗದ ವ್ಯಕ್ತಿತ್ವವನ್ನು ಪ್ರದರ್ಶಿಸುವ ಬಹಿರ್ ಅಂಗವೇ ನಾಲಿಗೆ. ನಾಲಿಗೆಯ ಮೂಲಕ ತಮ್ಮ ಆಂತರಿಕ ವ್ಯಕ್ತಿತ್ವವನ್ನು ತೋರಿಸಿಕೊಂಡಿದ್ದಾರೆ. ಅಷ್ಟೆ.

ದುಡುಕಿ ಹೇಗೆ ನಮ್ಮನ್ನು ಬೈದಿದ್ದಾರೋ ಹಾಗೆ ದುಡಿಕಿ ಒಮ್ಮೆ ತಮ್ಮ ದೌರ್ಬಲ್ಯವನ್ನು ಹೇಳಿಕೊಂಡಿದ್ದಾರೆ. " ನೀವು ನಿಜಕ್ಕೂ ಧೈರ್ಯಶಾಲಿಗಳು ಸತ್ಯವನ್ನು ನಿರ್ಭಯವಾಗಿ ಹೇಳಬಲ್ಲಿ. ನೀವು ಬಯಲಲ್ಲಿ ಸೈನ್ಯವನ್ನು ಎದುರಿಸುವ ಶೂರನಂತೆ; ನಾನು ಕೋಟೆಯ ಮರೆಯಲಿದ್ದು ಹೋರಾಡುವವನು. ಏಕೆಂದರೆ ಸಂಪ್ರದಾಯವನ್ನು ಮೀರಿ ಹೆಜ್ಜೆ ಇಡುವ ಸ್ಥಿತಿ ನನ್ನದಲ್ಲ."

ತಮಗೆ ನಿರ್ಭಯವಾಗಿ ಸತ್ಯವನ್ನು ಹೇಳುವ ಧೈರ್ಯವಿಲ್ಲದಾಗ ಸತ್ಯದ ದಾರಿಯಲ್ಲಿ ನಡೆಯುವ ಇತರರ ಬಗ್ಗೆ ಸೌಜನ್ಯದ ಎಲ್ಲೆ ಮೀರಿ ಟೀಕಿಸುವ ನೈತಿಕ ಹಕ್ಕು ಅವರಿಗೆಲ್ಲಿದೆ? ಶ್ರೀಗಳ ಪೀಠಾರೋಹಣ ರಜತ ಮಹೋತ್ಸವದ (1999) ಸನ್ನಿವೇಶದಲ್ಲಿ 25 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಧರ್ಮ ಗುರುವಿನ ಒಂದಾದರೂ ಭಾವಚಿತ್ರ? ಕೇಳಬೇಡಿ. ಇವರ ಬಸವ ನಿಷ್ಠೆ ಇಷ್ಟಿರುವಾಗ ಧರ್ಮಪಿತ ಬಸವಣ್ಣನವರನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ನಮಗೆ ಬಸವ ನಿಷ್ಠೆಯನ್ನು ಇವರು ಕಲಿಸುವುದು ಆಗತ್ಯವಿಲ್ಲ.




ಸೊಲ್ಲಾಪುರದಲ್ಲಿ ದಿ.26-1-2006 ರಂದು ಪೂಜ್ಯ ಶ್ರೀಜಗದ್ಗುರು ಮಾತೆ ಗಂಗಾದೇವಿಯವರಿಂದ ವಿಶ್ವಧರ್ಮ ಪ್ರವಚನ ಪ್ರಾರಂಭೋತ್ಸವ. ಬಸವ ಕಲ್ಯಾಣದ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಮಾತೆ ನೀಲಗಂಗಾದೇವಿ ಮತ್ತು ಸೊಲ್ಲಾಪುರದ ಮಹಾದೇವ ಪಾಟೀಲ ಮುಂತಾದವರು ವೇದಿಕೆಯಲ್ಲಿದ್ದಾರೆ.



ಸೊಲ್ಲಾಪುರದಲ್ಲಿ ದಿ.13-3-2006 ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 61ನೆಯ ವರ್ಧಂತಿ ಉತ್ಸವ ಆಚರಣೆ ಸಂದರ್ಭದಲ್ಲಿ ಧ್ವಜಾರೋಹಣ ಶರಣೆ ಲೀಲಾವತಿ ದೇಶಮುಖ ರಿಂದ, ಮಹಾದೇವಿ ವಾರದ, ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಮಹಾನಂದಾ ತಾಯಿ ಮುಗಳಿ, ಮಾತೆ ಸರ್ವಮಂಗಳಾದೇವಿ, ಮಾತೆ ಬಸವರತ್ನಾದೇವಿಯವರು ಚಿತ್ರದಲ್ಲಿದ್ದಾರೆ.



ಸೊಲ್ಲಾಪುರದಲ್ಲಿ ಪೂಜ್ಯ ಮಾತಾಜಿಯವರ ವರ್ಧಂತಿ ಉತ್ಸವ ಶರಣೆ. ಲೀಲಾವತಿ ದೇಶಮುಖ ಅವರಿಂದ ಆರತಿ.



ದಿ.27-3-2006ರಂದು ಇಚಲ ಕರಂಜಿಗೆ ಆಗಮಿಸಿದ ಶ್ರೀ ಸಿದ್ಧರಾಮ ಜ್ಯೋತಿಗೆ ಸ್ವಾಗತ ಮತ್ತು ಶರಣರಿಂದ ಪಥ ಸಂಚಲನ.



ಪೂಜ್ಯ ಮಾತಾಜಿಯವರಿಂದ ಮಹಾದೇವ ಪಾಟೀಲರಿಗೆ ಸತ್ಕಾರ (ಮಾಜಿ ಸಭಾಪತಿ)




ಪೂಜ್ಯ ಮಾತಾಜಿಯವರಿಂದ ವಿಶ್ವನಾಥ ಚಾಕೋತೆ ಮಾಜಿ ಆಮದಾರ (M.L.A)ಅವರಿಗೆ ಸತ್ಕಾರ




ಬಲಗಡೆ ಮಹಾದೇವ ಪಾಟೀಲ, ಪೂಜ್ಯ ಮತಾಜಿ, ಗಂಗಾಮಾತಾಜಿ ವಿಶ್ವನಾಥ ಬಾಕೋಡೆ, ಜಗದೀಶ ಪಾಟೀಲ (ನಗರ ಸೇವಕ), ರಾಜಣ್ಣ



ಸೋಲ್ಲಾಪುರದಲ್ಲಿ ಪೂಜ್ಯ ಮಾತಾಜಿ ಹಾಗೂ ಗಂಗಾಮಾತಾಜಿಯವರಿಗೆ ಪುಷ್ಪ ವೃಷ್ಟಿ



ಸೊಲ್ಲಾಪುರದಿಂದ ದಿ.9-2-2006 ರಂದು ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳ ನೇತೃತ್ವದಲ್ಲಿ ಹೊರಟ ಶ್ರೀ ಸಿದ್ಧರಾಮೇಶ್ವರ ಜ್ಯೋತಿಗೆ ಅಲ್ಲಮಪ್ರಭು ಗಿರಿಯಲ್ಲಿ ಭಕ್ತಿಪೂರ್ಣ ಸ್ವಾಗತ.



ಪೂಜ್ಯಮಾತಾಜಿಯವರಿಂದ ಶ್ರೀ ಸಿದ್ಧರಾಮೇಶ್ವರ ಜ್ಯೋತಿಗೆ ಸ್ವಾಗತ. ಶಿವನಗೌಡ ಪಾಟೀಲ ಸಂಕೇಶ್ವರ ಹಾಗೂ ಕೃಷ್ಣಪ್ಪಣ್ಣ ಮುಸಳೆಯವರು ಚಿತ್ರದಲ್ಲಿದ್ದಾರೆ.



ಅಲ್ಲಮಗಿರಿಯಲ್ಲಿ ನಡೆದ ಪ್ರಥಮ ಲಿಂಗಾಯತ ಗಣ ಮೇಳದ ಉದ್ಘಾಟನೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಮಾತಾಜಿಯವರಿಂದ.



ಲಿಂಗಾಯತ ಗಣ ಮೇಳದ ವೇದಿಕೆಯಲ್ಲಿ ಸಾಮೂಹಿಕ ಪ್ರಾರ್ಥನೆ.



ಆಂಧ್ರ ಪ್ರದೇಶ್ ರಾ.ಬ.ದಳದ ಪೋಷಕಾಧ್ಯಕ್ಷರಾದ ಶರಣ. ಸುಭಾಷ್ ಪಾಟೀಲರಿಂದ ಧ್ವಜಾರೋಹಣ.



ಪೂಜ್ಯ ಮಾತಾಜಿಯವರಿಂದ ಉದ್ಘಾಟನೆ. ಜಗದ್ಗುರು ಪೂಜ್ಯ ಗಂಗಾಮಾತಾಜಿ, ಮಾಲು ತಾಯಿ ಚಂದ್ರಕಾಂತ ಸ್ವಾಮಿ, ಅಶೋಕ ಸ್ವಾಮಿ, ಮುಂತಾದ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು



ಮರಾಠಿ ಆವೃತ್ತಿ ಪೂರ್ಣವತಾರಿ ಬಸವಣ್ಣ ಪುಸ್ತಕ ಬಿಡುಗಡೆ, ಮುಂಬಯಿಯ ಆರ್. ಬಿ. ಹೆಬ್ಬಳ್ಳಿಯವರಿಂದ.



ಕನ್ನಡದಿಂದ ಮರಾಠಿಗೆ ಪೂಜ್ಯ ಶ್ರೀ ಮಾತಾಜಿಯವರು ಬರೆದ ಪೂರ್ಣವತಾರಿ ಬಸವಣ್ಣ ಪುಸ್ತಕವನ್ನು ಭಾಷಾಂತರಿಸಿದ ಮಲ್ಲಿನಾಥ ಐನಾಪುರೆ ಅವರಿಂದ ಪುಸ್ತಕದ ಸಾರ ಕುರಿತು ಉಪನ್ಯಾಸ.




ಅಲ್ಲಮ ಪ್ರಭು ಜಯಂತಿಯಂದು ಅಲ್ಲಮ ಪ್ರಭು ಗಿರಿಯಲ್ಲಿ ಪೂಜ್ಯ ಗಂಗಾಮಾತಾಜಿಯವರಿಂದ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ



ಅಲ್ಲಮಪ್ರಭು ಗಿರಿಯಲ್ಲಿ ಅಲ್ಲಮ ಪ್ರಭು ಜಯಂತಿಯಂದು ಸಾಮೂಹಿಕ ಇಷ್ಟಲಿಂಗ ಪೂಜಾ ನಿರತರಾದ ಪೂಜ್ಯ ಗಂಗಾಮಾತಾಜಿ, ಪೂಜ್ಯರಾದ ಬಸವಕುಮಾರ ಸ್ವಾಮೀಜಿ ಹಾಗೂ ಚನ್ನಬಸವಾನಂದ ಸ್ವಾಮೀಜಿಯವರು




ಜ್ಯೋತಿ ಬೆಳಗುತಿದೆ ಅಲ್ಲಮ ಪ್ರಭು ಜ್ಯೋತಿ ಬೆಳಗುತಿದೆ........
ಅಲ್ಲಮಪ್ರಭುದೇವರು ಅಂದು ಹಚ್ಚಿದ ಜ್ಯೋತಿ ಈಗಲೂ ಉರಿಯುತ್ತಿದೆ. ಗೆದ್ದುಗೆ ಮತ್ತು ಜ್ಯೋತಿಯ ಚಿತ್ರ



ಯುಗಾದಿಯ ದಿನದಂದು ಅಲ್ಲಮಪ್ರಭುಗಿರಿಯ ಅಲ್ಲಮ ಪ್ರಭು ದೇವಾಲಯದಲ್ಲಿ ಜ್ಯೋತಿಯ ದರ್ಶನ ಪಡೆದು ಅಲ್ಲಮ ಪ್ರಭುದೇವರಿಗೆ ಆರತಿ ಬೆಳಗುತ್ತಿರುವ ಪೂಜ್ಯ ಗಂಗಾಮಾತಾಜಿಯವರು. ಬಸವಧರ್ಮ ಪೀಠದ ಪೂಜ್ಯ ಮಾತೆ ಜ್ಞಾನೇಶ್ವರಿ ಹಾಗೂ ಚನ್ನಬಸವಾನಂದ ಸ್ವಾಮೀಜಿಯವರು ಚಿತ್ರದಲ್ಲಿದ್ದಾರೆ.




ಲಿಂಗಾಯತ ಗಣಮೇಳದಲ್ಲಿ ಶರಣೆ ರಜನೀತಾಯಿ ಮುಗ್ದುಮ್ ಅವರು "ಕಲ್ಯಾಣ ಕಿರಣ" ಮಾಸಿಕದ ಮರಾಠಿ ಆವೃತ್ತಿಯನ್ನು ಬಿಡುಗಡೆ ಮಾಡುತ್ತಿರುವುದು.



ಅಲ್ಲಮಪ್ರಭುಗಿರಿಯ ಲಿಂಗಾಯತ ಗಣಮೇಳದಲ್ಲಿ ಸಮುದಾಯ ಪ್ರಾರ್ಥನೆಯ ಉದ್ಘಾಟನೆ ನೆರವೇರಿಸಿದ ಮಹಾರಾಷ್ಟ್ರದ ಇಂಧನ ಮತ್ತು ಫಲೋತ್ಪಾದನ ಸಚಿವ ವಿನಯ್ ರಾವ್ ಕೋರೆ ಮತ್ತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಸತ್ ಸದಸ್ಯೆ ಶ್ರೀಮತಿ ನಿವೇದಿತ ಮಾನೆಯವರು




ಸಮುದಾಯ ಪ್ರಾರ್ಥನೆ ಉದ್ಘಾಟನೆ. ಸಚಿವರಾದ ವಿನಯ್‌ರಾವ್ ಕೋರೆ ಅವರಿಂದ ಸಂಸತ್ ಸದಸ್ಯೆ ನಿವೆದಿತಾ ಮಾನೆ, ವಿಲಾಸ್‌ರಾವ್ ಗಾತಾಡೆ, ಕಲ್ಲಪ್ಪ ಅವಾಡೆ ಮುಂತಾದ ಗಣ್ಯರು ಚಿತ್ರದಲ್ಲಿದ್ದಾರೆ.



ಸಚಿವ ವಿನಯ್ ರಾವ್ ಕೋರೆಯವರಿಗೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ಆಶೀರ್ವಾದ



ಸಂಸತ್ ಸದಸ್ಯೆ ನಿವೇದಿತಾ ಮಾನೆಯವರು ಗುರು ಬಸವಣ್ಣನವರು, ಪ್ರಭುದೇವರು ಮತ್ತು ಸಿದ್ಧರಾಮೇಶ್ವರರ ಭಾವಚಿತ್ರವಿರುವ ಫೋಟೋ ಕಾಪಿ ಬಿಡುಗಡೆ ಮಾಡಿದರು.




ಸಂಸತ್ ಸದಸ್ಯೆ ನಿವೇದಿತ ಮಾನೆ ಅವರಿಗೆ ಪೂಜ್ಯ ಮಾತಾಜಿಯವರಿಂದ ಆಶೀರ್ವಾದ ಪೂರ್ವಕ ಸತ್ಕಾರ




ಲಿಂಗಾಯತ ಗಣಮೇಳದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಖ್ ಧರ್ಮ ಪ್ರಚಾರಕ (ಸಾಂಗ್ಲಿ)ರಾದ ಜೀತೇಂದ್ರ ಸಿಂಗ್ ಮತ್ತು ಜಸ್ಪಿರ್ ಸಿಂಗ್ ಅವರು ಪೂಜ್ಯ ಮಾತಾಜಿಯವರೊಂದಿಗೆ ವೇದಿಕೆಯಲ್ಲಿದ್ದಾರೆ




"ಗುರುವಾಣಿ" ಕೀರ್ತನ ಹೃದಯ ತುಂಬಿ ಗುರು ಮಹಿಮೆಯನ್ನು ಹಾಡುತ್ತಿರುವ ಜೀತೇಂದ್ರ ಸಿಂಗ್ ಮತ್ತು ಜಸ್ಪಿರ್ ಸಿಂಗ್



ಮೊದಲನೆಯ ದಿನ ಬಸವಧ್ವಜಾರೋಹಣ ಶ್ರೀ ಅಶೋಕ್ ಸ್ವಾಲಿಯವರಿಂದ




ಧರ್ಮ ಚಿಂತನ ಗೋಷ್ಠಿಯಲ್ಲಿ ಬಸವ ಧ್ವಜಾರೋಹಣ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ



ಅಲ್ಲಮಪ್ರಭುಗಿರಿಯಲ್ಲಿರುವ ಐತಿಹಾಸಿಕ ಸ್ಥಳ ತಿರುಗುತ್ತಿ, ಅಲ್ಲಮಪ್ರಭು ಮತ್ತು ಸಿದ್ಧರಾಮೇಶ್ವರರು ಪರಸ್ಪರ ಬೀಳ್ಕೊಂಡ ಸ್ಥಳ




ಅಲ್ಲಮ ಪ್ರಭು ಗಿರಿಯಲ್ಲಿ ಬಸವಧರ್ಮ ಪೀಠದ ವತಿಯಿಂದ ಸ್ಥಾಪಿಸಲಾದ
ಜಗದ್ಗುರು ಅಲ್ಲಮಪ್ರಭು ಮಠದ ವಿಹಂಗಮ ನೋಟ



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ವರ್ಧಂತಿಯಂದು ಶರಣೆಯರಿಂದ ಪುಷ್ಪವೃಷ್ಟಿ




ಪೂಜ್ಯ ಮಾತಾಜೀಯವರ 61ನೇ ವರ್ಧಂತಿ ಉತ್ಸವದ ಸಮಾರಂಭದಲಿ ಶರಣ ವಿಠ್ಠಲ ಹೇರೂರು, ಡಾ|| ಟಿ.ಆರ್. ಮಂಜುನಾಥ್ ಪ್ರಸಾದ್
ಮತ್ತು ಶರಣ ಪುಟ್ಟರುದ್ರಪ್ಪ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ ಮುಂತಾದವರು ಉಪಸ್ಥಿತರಿದ್ದರು



ಪೂಜ್ಯ ಅಲ್ಲಮಪ್ರಭು ಸ್ವಾಮಿಜಿಯವರ ನೆಲಮಂಗಳದ ವಿಶ್ವಧರ್ಮ ಪ್ರವಚನ ಸಂಧರ್ಭದಲ್ಲಿ
ಪೂಜ್ಯ ಮಾತಾಜಿಯವರಿಗೆ ಭವ್ಯ ಮೆರವಣಿಗೆ ಮೂಲಕ ಅಭಿನಂದನಾ ಸಮಾರಂಭಕ್ಕೆ ಸ್ವಾಗತಿಸುತ್ತಿರುವುದು



ನೆಲಮಂಗಳದ ವಿಶ್ವಧರ್ಮ ಪ್ರವಚನದಲ್ಲಿ ಪೂಜ್ಯ ಮಾತಾಜಿಯವರು ಸಾಮೂಹಿಕ ಪ್ರಾರ್ಥನೆ ನಡೆಸಿಕೊಟ್ಟರು.
ಶಾಸಕ ಆಂಜನೇಯ ಮೂರ್ತಿ ಮತ್ತು ಪೂಜ್ಯ ತ್ರಯರನ್ನು ಚಿತ್ರದಲ್ಲಿ ಕಾಣಬಹುದು.





ವಿಶ್ವಕಲ್ಯಾಣ ಮಿಷನ್ ಆಶ್ರಯದಲ್ಲಿ ನಡೆಸಲಾಗುತ್ತಿರುವ ಅನಾಥಾಲಯಗಳಲ್ಲಿ ಬಸವ ಗಂಗೋತ್ರಿ
ಅನಾಥಾಲಯಕ್ಕೆ ನೂತನವಾಗಿ ಸೇರ್ಪಡೆಯಾಗಿರುವ ಮಗು ಕಲ್ಯಾಣ ಮತ್ತು ವನಿತಾ

ಬಸವ ಕಲ್ಯಾಣದಲ್ಲಿ ಐದನೆಯ ಕಲ್ಯಾಣ ಪರ್ವ

ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ

ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ ಬಸವ ಕಲ್ಯಾಣದಲ್ಲಿ 2006ರ ಮೇ 6,7 ಮತ್ತು 8ರಂದು ಐದನೆಯ ಕಲ್ಯಾಣಪರ್ವವು ಜರುಗಲಿದೆ. ದಿ.6 ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕು. ದಿ.6ರಂದು ಮಧ್ಯಾಹ್ನ 3-30ರಿಂದ ಧಾರ್ಮಿಕ ರಸ ಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ ಸಂಜೆ 6-30ಕ್ಕೆ ಧರ್ಮಚಿಂತನಗೋಷ್ಠಿ ಮತ್ತು ಕಲ್ಯಾಣ ಕ್ರಾಂತಿ ನೃತ್ಯ ರೂಪಕ ದಿ.7ರಂದು ಬೆಳಿಗ್ಗೆ 7 ರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ. 10-30ರಿಂದ ಸಮುದಾಯ ಪ್ರಾರ್ಥನೆ ಮತ್ತು ಶರಣ ವಂದನೆ. ಮಧ್ಯಾಹ್ನ 3-30ರಿಂದ ಧಾರ್ಮಿಕ ರಸ ಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ ಸಂಜೆ 6-30ರಿಂದ ಧರ್ಮಚಿಂತನಗೋಷ್ಠಿ. ದಿ.8-30ರಿಂದ ಬೆಳಿಗ್ಗೆ 10-30ಕ್ಕೆ ಅಲ್ಲಮ ಪ್ರಭು ಶೂನ್ಯ ಪೀಠಾರೋಹಣೋತ್ಸವದ 4ನೆಯ ವಾರ್ಷಿಕೋತ್ಸವ. ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಂದ ಪೀಠಾರೋಹಣ.

ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಕಾರ್ಯಕ್ರಮದಲ್ಲಿ ಪೂರ್ಣವಾಗಿ ಭಾಗಿಗಳಾಗಬೇಕೆಂದು ಕೋರುತ್ತೇವೆ.


ಸ್ವಯಂ ಸೇವಕರಿಗೆ ಕರೆ

ಕಾರ್ಯಕ್ರಮದ ಸಿದ್ಧತೆ, ಪ್ರಸಾದ ನಿಲಯ, ವಾಸ ಗೃಹ ಮುಂತಾದ ಎಲ್ಲ ಕಡೆ ಸ್ವಯಂ ಸೇವಕರ ಅಗತ್ಯ ಬಹಳವಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಬಸವ ಮಹಾ ಮನೆಗೆ ಬೇಗನೆ ಆಗಮಿಸಬೇಕೆಂದು, ತಮ್ಮ ಊರುಗಳಲ್ಲಿ ಬಸವ ಜಯಂತಿ ಉತ್ಸವ ನೆರವೇರಿಸಬೇಕಾದ ಜವಾಬ್ದಾರಿ ಹೊತ್ತವರು ದಿ.30-4-2006ರಂದು ಸಮಾರಂಭ ಮುಗಿಯುತ್ತಲೇ ತಮ್ಮ ಊರುಗಳಿಂದ ಹೊರಟು ಬರಬೇಕೆಂದು ವಿನಂತಿಸುತ್ತೇವೆ. -ವ್ಯವಸ್ಥಾಪಕರು, ಕಲ್ಯಾಣ ಪರ್ವ ಉತ್ಸವ ಸಮಿತಿ

ಬಸವ ಜಯಂತಿಯ ಕಾರ್ಯಕ್ರಮಗಳು

ದಿ.30-4-2006ರಂದು 873ನೆಯ ಬಸವ ಜಯಂತಿಯು ಒದಗಿ ಬಂದಿದ್ದು, ಪ್ರತಿಯೊಬ್ಬರೂ ಆಚರಿಸುವುದು ಕರ್ತವ್ಯವಾಗಿದೆ.

1. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕಿನಲ್ಲಿ 20ನೆಯ ಮುಖ್ಯ ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ, ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳ ನೇತೃತ್ವದಲ್ಲಿ ಬೆಳಿಗ್ಗೆ 10-30ರಿಂದ ಪೂಜೆ-ಪ್ರಾರ್ಥನೆ-ಪ್ರವಚನಗಳೊಡನೆ ನೆರವೇರಲಿದೆ. ಪ್ರಸಾದ ದಾಸೋಹವಿರುತ್ತದೆ.
2. ಧಾರವಾಡ ನಗರದ ಕಡಪಾ ಮೈದಾನದಲ್ಲಿ ಬೆಳಿಗ್ಗೆ 10 ಗಂಟೆಗೆ ಶರಣ ಬಂಧುಗಳು ಸಮಾವೇಶವಾಗಿ ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಹಾಗೂ ಪಥ ಸಂಚಲನದಲ್ಲಿ ಭಾಗಿಗಳಾಗುವರು. 10ರಿಂದ 11ಗಂಟೆಯವರೆಗೆ ಪಥ ಸಂಚಲನವಾದ ನಂತರ ಉಳವಿ ರಸ್ತೆ ರೇಲ್ವೆ ಗೇಟ್ ಬಳಿ ಇರುವ ಜಗನ್ಮಾತಾ ಅಕ್ಕಮಹಾದೇವಿ ಮಠದ ಬಸವ ಮಂಟಪದಲ್ಲಿ ಪ್ರವಚನ-ಉಪನ್ಯಾಸ ನಡೆಯುತವೆ. ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರ ನೇತೃತ್ವದಲ್ಲಿ ನಡೆಯುವ ಈ ಕಾರ್ಯಕ್ರಮದ ನಂತರ ಪ್ರಸಾದ ದಾಸೋಹವಿರುತ್ತದೆ. ಮಾತ್ರವಲ್ಲ ಕಡಪಾ ಮೈದಾನದ ಮುಂದಿನ ಮುಖ್ಯ ರಸ್ತೆಯ ಪಕ್ಕದಲ್ಲಿ ಪ್ರಸಾದ ವಿನಿಯೋಗವಿರುತ್ತದೆ.
3. ಸೊಲ್ಲಾಪುರದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ನಡೆಯುತದೆ.
4. ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆ ಮಹಾಮಠ ವಿಶೇಷ ಪೂಜೆ-ದರ್ಶನ-ಪ್ರಸಾದ ವಿತರಣೆ ಪೂಜ್ಯ ಶ್ರೀ ಮಹದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ನಡೆದರೆ, ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ವಿಶೇಷ ಪೂಜೆ ದರ್ಶನ-ಪ್ರಸಾದ ಲಭ್ಯವಾಗುತ್ತದೆ.



ಅಲ್ಲಮ ಪ್ರಭು ಗಿರಿಯಲ್ಲಿರುವ ನೈಸರ್ಗಿಕ ನೀರಿನ ಬುಗ್ಗೆಗೆ ಬಸವ ತೀರ್ಥ ಎಂದು ನಾಮಕರಣ ಮಾಡಿ ಗುರು ಬಸವಣ್ಣನವರ ಮೂರ್ತಿ ಪ್ರತಿಷ್ಠಾಪಿಸಲಾಯಿತು. ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ, ಶಿವರಾಯ ಬುಕ್ಕಾ ಅವರು ಚಿತ್ರದಲ್ಲಿದ್ದಾರೆ



ಬಸವ ತೀರ್ಥದಲ್ಲಿ ಗುರು ಬಸವಣ್ಣನವರ ಪ್ರಾಣ, ಪೂಜ್ಯ ಶ್ರೀ ಜ್ಞಾನೇಶ್ವರಿ ಮಾತಾಜಿಯವರಿಂದ

KA/BGW-50/WPP-17/2006-2008





ಮಹಾರಾಷ್ಟ್ರದ ಪ್ರಥಮ ಲಿಂಗಾಯತ ಗಣಮೇಳದಲ್ಲಿ ಪಾಲ್ಗೊಂಡ ಶರಣ-ಶರಣೆಯರು